ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

# ತಪೋವಾಣಿ

ಸಂ. 9 ಸಂ. 2 ಫೆಬ್ರವರಿ 2012 ರೂ.25

## ಅನಿಸಿಕೆಗಳು

ಗುರೂಜಿ ಕೃಷ್ಣಾನಂದ

ಇಚ್ಛಾ ಸ್ವಾತಂತ್ರ್ಯ ನಮಗೆ ಕೊಟ್ಟಿರುವ ಒಂದು ವರ ಎಂದು ನನ್ನ ಗುರು, ಮಹರ್ಷಿ ಅಮರ, ಹೇಳಿದ್ದರು. ನಾವು ಯಾವುದನ್ನು ಬೇಕಾದರೂ ಆರಿಸಿಕೊಳ್ಳಲು ಸ್ವತಂತ್ರರು. ಯಾವುದನ್ನಾದರೂ ಸರಿ, ತಪ್ಪನ್ನಾದರೂ ಕೂಡ. ಸ್ವತಂತ್ರ ವಾತಾವರಣದಲ್ಲಿ ನಾವು ಬೆಳೆಯಲು ಸಾಧ್ಯ ಎಂದು ಅವರು ವಿವರಿಸಿದ್ದರು. ಒಮ್ಮೊಮ್ಮೆ ನಾವು ತಪ್ಪಾದದ್ದನ್ನು ಆರಿಸಿಕೊಂಡು ಫೇಲ್ ಆಗುತ್ತೇವೆ. ಆದರೆ ಅದರಿಂದ ಪಾಠ ಕಲಿತು ಬೆಳೆಯುತ್ತೇವೆ. ಇದನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ.

ಸ್ವಾತಂತ್ರ್ಯದಲ್ಲಿ ನನಗೆ ಪೂರ್ಣ ನಂಬಿಕೆಯಿದೆ. ಎಲ್ಲಾ ಜಾಗೃತಗೊಂಡ ವ್ಯಕ್ತಿಗಳು ನಂಬುತ್ತಾರೆ. ಸ್ವಾತಂತ್ರ್ಯ ನಾಗರಿಕತೆಯ ಲಕ್ಷಣ; ಅಧ್ಯಾತ್ಮಿಕತೆಯ ಲಕ್ಷಣ. ನಾವು ಬೇರೆಯವರ ಸ್ವತಂತ್ರ ಅಭಿವ್ಯಕ್ತಿಗೆ ಅವಕಾಶ ಕೊಡಬೇಕು. ಬೇರೆಯವರು ತಮ್ಮದೇ ದಾರಿಯಲ್ಲಿ ಬದುಕಲು ಅವಕಾಶ ಕೊಡಬೇಕು. ಸ್ವತಂತ್ರ ಚಿಂತನೆ, ಬೆಳವಣಿಗೆಗಳಿಗೆ ಅವಕಾಶ ಕೊಡಬೇಕು. ನಾಗರಿಕ ಜನರು ತಮ್ಮ ಸ್ವಾತಂತ್ರ್ಯವನ್ನು ಬೇರೆಯವರ ಸ್ವಾತಂತ್ರ್ಯಕ್ಕೆ ಧಕ್ಕೆ ಬಾರದ ಹಾಗೆ ಬಳಸುತ್ತಾರೆ. ಅವರು ಬೇರೆಯವರ ಭಾವನೆಗಳಿಗೆ, ನಂಬಿಕೆಗಳಿಗೆ ಗಾಯ ಮಾಡುವುದಿಲ್ಲ.

ನಾವು ನಮ್ಮ ಸ್ವಾತಂತ್ರ್ಯವನ್ನು ಜವಾಬ್ದಾರಿಯಿಂದ ಬಳಸಿದಾಗ, ಕೆಲವು ಅಲಿಖಿತ ನಿಯಮಗಳಿಗೆ ಬದ್ಧರಾಗಿರಬೇಕೆಂಬ ಸತ್ಯವನ್ನು ಗುರುತಿಸುತ್ತೇವೆ. ನಮ್ಮ ಸ್ವಾತಂತ್ರ್ಯವನ್ನು ಹುಚ್ಚುಹುಚ್ಚಾಗಿ ಬಳಸಲು ಸಾಧ್ಯವಿಲ್ಲವೆಂದು ಅರಿಯುತ್ತೇವೆ. ಆಗ, ನಾವು ನಿಜವಾಗಲೂ ಸಂಪೂರ್ಣ ಸ್ವತಂತ್ರರು ಅಲ್ಲ ಎಂದು ತಿಳಿಯುತ್ತೇವೆ. ನಾವು ಬೇರೆಯವರ ಸ್ವಾತಂತ್ರ್ಯ–ಸೆಂಟಿಮೆಂಟ್‌ಗಳನ್ನು ಗೌರವಿಸಬೇಕು. ವಿಶ್ವದ ನಿಯಮಗಳನ್ನು ಗೌರವಿಸಬೇಕು. ಸ್ವಾತಂತ್ರ್ಯದ ಜೊತೆಯಲ್ಲಿ ಜವಾಬ್ದಾರಿಯೂ ಕೂಡಿಬರುತ್ತದೆ. ಜವಾಬ್ದಾರಿಯುತವಾದ ಸ್ವಾತಂತ್ರ್ಯ ನಾಗರಿಕತೆಯ ಗುಣಮಟ್ಟವನ್ನು ತೋರಿಸುತ್ತದೆ.

ಒಂದು ಪುಸ್ತಕವನ್ನು ಬ್ಯಾನ್ ಮಾಡಿದಾಗ, ಒಂದು ಸಿನೆಮಾವನ್ನು ಬ್ಯಾನ್ ಮಾಡಿದಾಗ ಮತ್ತು ಯಾವುದೇ ಒಂದು ಅಭಿವ್ಯಕ್ತಿಯನ್ನು ಹಿಂಸಾತ್ಮಕವಾಗಿ ವಿರೋಧಿಸಿದಾಗ ನನಗೆ ದುಃಖವಾಗುತ್ತದೆ, ಅದೂ ಪ್ರಜಾಪ್ರಭುತ್ವದಲ್ಲಿ. ಒಂದು ಪುಸ್ತಕ, ಒಂದು ಸಿನೆಮಾ ಅಥವಾ ಒಂದು ಅಭಿವ್ಯಕ್ತಿ ಸರಿಯಾಗಿ ಇಲ್ಲದಿದ್ದರೆ ಜನರೇ ಅದನ್ನು ತಿರಸ್ಕರಿಸುತ್ತಾರೆ. ಸರ್ಕಾರ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ಸರ್ಕಾರಗಳು ಮಧ್ಯಪ್ರವೇಶಿಸಿದಾಗ, ಹಿಂದೆ ಏನೋ ಒಂದು ರಾಜಕೀಯ ಉದ್ದೇಶ ಇದ್ದೇ ಇರುತ್ತದೆ. ಜನರಿಗೂ ಬುದ್ಧಿ–ತಿಳುವಳಿಕೆಗಳಿರುತ್ತವೆ ಎನ್ನುವುದನ್ನು ಸರ್ಕಾರಗಳು ಮರೆಯುತ್ತವೆ.

ನಾಗರಿಕತೆ ಮತ್ತು ಅಧ್ಯಾತ್ಮಿಕತೆಗಳ ಮಧ್ಯೆ ವ್ಯತ್ಯಾಸವಿದೆ ಎಂದು ನನಗೆ ಅನಿಸುವುದಿಲ್ಲ. ಪರಸ್ಪರ ಸಹಿಷ್ಣುತೆ, ಶಾಂತಿಯುತವಾದ ಭಿನ್ನಾಭಿಪ್ರಾಯಗಳು–ವಿರೋಧ ಮತ್ತು ಬೇರೆಯವರ ಸ್ವಾತಂತ್ರ್ಯವನ್ನು ಗೌರವಿಸುವುದು ಪ್ರಬುದ್ಧ ನಾಗರಿಕತೆಯ ಲಕ್ಷಣ. ಅಧ್ಯಾತ್ಮಿಕತೆಯ ಗುರುತು. ಮುಂದಿನ ಯುಗಕ್ಕೆ ನಾವು ಹೆಜ್ಜೆ ಇಡುತ್ತಿರುವ ಈ ಸಮಯದಲ್ಲಿ, ನಾಗರಿಕತೆ ಬೆಳೆಯುತ್ತಿರುವ ಈ ಸಮಯದಲ್ಲಿ, ನಾನು ಜನರಲ್ಲಿ ಜಾಗೃತಿಯನ್ನು ಕಾಣುತ್ತಿದ್ದೇನೆ. ಇದು ನನ್ನ ಭಾವನೆಯಲ್ಲ, ಭವಿಷ್ಯದ ಒಂದು ವಿಷನ್.

ಈಗ ನಾವು ಅಂತಃಪ್ರಜ್ಞೆಯ ತುಮುಲದ ಸಮಯದಲ್ಲಿ ಇದ್ದೇವೆ. ದೊಡ್ಡ ದೊಡ್ಡ ಬದಲಾವಣೆಗಳ ಸಮಯದಲ್ಲಿ ಇದ್ದೇವೆ. ಈ ಪ್ರಕ್ರಿಯೆಗಳು ಸುಲಭವಲ್ಲ, ನೋವಿಲ್ಲದಿಲ್ಲ. ಈಗ ಗೊಂದಲ–ದುಗುಡಗಳು ಸಹಜ. ಆದರೆ ನಾವು ನಿರಾಶರಾಗಬಾರದು. ಅಧಿಕಾರದಲ್ಲಿರುವವರು ಒಳ್ಳೆಯ ಬದಲಾವಣೆಗಳನ್ನು ತರುವುದಿಲ್ಲ. ಅವರಿಗೆ ದೂರದೃಷ್ಟಿ ಇರುವುದಿಲ್ಲ. ನಾವು ಅವರ ಬಗ್ಗೆ ತಲೆಕೆಡಿಸಿಕೊಳ್ಳದೆ, ನಮ್ಮ ವೈಯಕ್ತಿಕ ಬೆಳವಣಿಗೆಯ ಕಡೆ ಗಮನ ಕೊಡಬೇಕು. ಹೆಚ್ಚು ಆಧ್ಯಾತ್ಮಿಕರಾಗಬೇಕು. ನಮ್ಮ ಧ್ಯಾನ–ಇಚ್ಛೆಗಳಿಂದ ಬದಲಾವಣೆಗಳ ಶಕ್ತಿಯನ್ನು ಪ್ರಬಲಗೊಳಿಸಬೇಕು. ನಾವು ಸೃಷ್ಟಿಕರ್ತರು. ನಾವೇ ಭವಿಷ್ಯ.

ಮಹರ್ಷಿ ಅಮರರವರು ಕಾಲದಲ್ಲಿ ಪ್ರಯಾಣಮಾಡುವುದರಲ್ಲೂ ಪರಿಣಿತರಾಗಿದ್ದರು. ಅವರು ಭವಿಷ್ಯಕ್ಕೆ ಪ್ರಯಾಣಮಾಡಿ ಒಂದು ಹೊಸಯುಗ ಹತ್ತಿರದಲ್ಲಿದೆ ಎಂದು ಹೇಳಿದ್ದರು. ಬದಲಾವಣೆಗಳ ಕಾಲದಲ್ಲಿರುವ ನಾವು, ಹೊಸಯುಗಕ್ಕೆ ಕಾಯೋಣ. ■

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಭಾರತ.
✆ (080) 2846 5280, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ–ಮೇಲ್: info@lightagemasters.com ವೆಬ್‌ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ. 300/- ಡಿಡಿಯನ್ನು 'Manasa Light Age Foundation' ಹೆಸರಿನಲ್ಲಿ ಕಳುಹಿಸಬೇಕು. ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



31-12-2011ರ ಮಧ್ಯರಾತ್ರಿ, ತಪೋನಗರ ನಿವಾಸಿಗಳು ಗುರೂಜಿಯವರ ಜೊತೆಯಲ್ಲಿ ಹೊಸವರ್ಷವನ್ನು ಸ್ವಾಗತಿಸುತ್ತಿರುವುದು.

## ಸುದ್ದಿ-ಸೂಚನೆ

- ತಪೋನಗರ ನಿವಾಸಿಗಳು ಗುರೂಜಿಯವರೊಂದಿಗೆ 31-12-2011ರ ಮಧ್ಯರಾತ್ರಿ, ಹೊಸವರ್ಷ 2012ನ್ನು ಸ್ವಾಗತಿಸಲು ತಪೋನಗರದಲ್ಲಿ ಸೇರಿದ್ದರು.
- 5-2-2012 ರಂದು ತಪೋನಗರದಲ್ಲಿ ನಡೆಯುವ ಅಮರ ಜಯಂತಿ ಕಾರ್ಯಕ್ರಮದಲ್ಲಿ - ಗುರೂಜಿಯವರ "Master-Pupil Talks" ಇಂಗ್ಲೀಷ್ ಪುಸ್ತಕ ಮತ್ತು ಅದರ ಕನ್ನಡ ಅನುವಾದ, ಸೀಮಾ ಅಲ್‌ಮೇಲ್‌ರವರ "iGuruji (Vol. 6)" ಹಾಗೂ ಅಧ್ಯಯನ ಕೇಂದ್ರದ "Light Body and Other Realities" ಪುಸ್ತಕಗಳ ಬಿಡುಗಡೆಯನ್ನು ಹಮ್ಮಿಕೊಳ್ಳಲಾಗಿದೆ.
- ಶಂಬಲ ಗ್ರೂಪ್‌ನ ಹೊಸ ಬ್ಯಾಚ್ 8-1-2012 ರಂದು ಆರಂಭವಾಗಿದೆ. ಹಿಂದಿನ ಬ್ಯಾಚ್‌ಗಳ ಸದಸ್ಯರು ಕೂಡಾ ಗುರೂಜಿಯವರ ವಿಶೇಷ ಮಾರ್ಗದರ್ಶನ ಮತ್ತು ಶಂಬಲ ಮಾಸ್ಟರ್‌ರಿಂದ ದೀಕ್ಷೆಯನ್ನು ಪಡೆಯಲು ಸೇರಿದ್ದರು.
- 15-1-2012 ರಂದು 'ರಾ-ಗ್ರೂಪ್' ಸದಸ್ಯರು ಗುರೂಜಿಯವರಿಂದ ವಿಶೇಷ

## ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 01 | ಬುಧ | ಅಮರ ಜನ್ಮದಿನ |
| 02 | ಗುರು | ಶುಕ್ಲ ದಶಮಿ |
| 05 | ಭಾನು | ಅಮರ ಜಯಂತಿ ಆಚರಣೆ |
| 07 | ಮಂಗಳ | ಪೂರ್ಣಿಮಾ |
| 15 | ಬುಧ | ಕೃಷ್ಣಾಷ್ಟಮಿ |
| 20 | ಸೋಮ | ಮಹಾಶಿವರಾತ್ರಿ |
| 21 | ಮಂಗಳ | ಅಮಾವಾಸ್ಯೆ |

## ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು: | ಉಪನ್ಯಾಸಗಳು: ಬೆಳಿಗ್ಗೆ 11-12<br>ವಿಶೇಷ ಧ್ಯಾನ & ಲೈಟ್ ಚಾನಲಿಂಗ್: ಮಧ್ಯಾಹ್ನ 12-1 |
| 05-02-12 | ಅಮರ ಜಯಂತಿ ಆಚರಣೆ |
| 20-02-12 | ಮಹಾಶಿವರಾತ್ರಿ ವಿಶೇಷ ಧ್ಯಾನ: ಮಧ್ಯಾಹ್ನ 12-1 |

## ತಪೋನಗರದಲ್ಲಿ ಅಮರ ಜಯಂತಿ ಕಾರ್ಯಕ್ರಮ

### ಭಾನುವಾರ, 5-2-2012

| | |
|---|---|
| ಬೆಳಿಗ್ಗೆ 11 ಕ್ಕೆ | ಸ್ವಾಗತ ಭಾಷಣ<br>ಭಾಷಣಗಳು<br>ಗುರೂಜಿಯವರ ನುಡಿಗಳು<br>ಪುಸ್ತಕ ಬಿಡುಗಡೆ<br>ವಿಶೇಷ ಧ್ಯಾನ<br>ಗುರೂಜಿಯವರಿಂದ - ಆಶೀರ್ವಾದ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

## ಆನೇಕಲ್ ಕಾರ್ಯಕ್ರಮ

ಅಮರ ಜಯಂತಿ ಕಾರ್ಯಕ್ರಮವನ್ನು ಆನೇಕಲ್‌ನ ನಮ್ಮ ಸಪ್ತರ್ಷಿ ಧ್ಯಾನ ಕೇಂದ್ರದಲ್ಲಿ 01-02-2012ರಂದು ಸಂಜೆ 6 ಘಂಟೆಗೆ ಆಯೋಜಿಸಲಾಗಿದೆ.

ಈಗ www.lightagemasters.com ವೆಬ್‌ಸೈಟ್ ಮೂಲಕ ಹೊರದೇಶಗಳಲ್ಲಿ ವಾಸಿಸುವ ನಮ್ಮ ಸಾಧಕರು ತಮ್ಮ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಆನ್‌ಲೈನ್‌ನಲ್ಲಿ ಹಣ ಕಳುಹಿಸುವ ವ್ಯವಸ್ಥೆಯನ್ನು ಒದಗಿಸಲಾಗಿದೆ.

11-2-2012 ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.

## ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ ಸುದ್ದಿ

- ಶಾಲಾ ಅಧ್ಯಾಪಕ ವೃಂದ, ವಿದ್ಯಾರ್ಥಿಗಳು ಮತ್ತು ಆಡಳಿತ ವರ್ಗ ಲೈಟ್ ಚಾನಲಿಂಗ್ ಕಾರ್ಯಕ್ರಮವನ್ನು ಪ್ರಾಮಾಣಿಕವಾಗಿ ನಡೆಸುತ್ತಿರುವ ವಿಷಯ ನಮ್ಮನ್ನು ಭಾವುಕರನ್ನಾಗಿಸಿದೆ. ಒಬ್ಬ ಹುಡುಗ ತನ್ನ ತಂದೆ ಮದ್ಯಪಾನವನ್ನು ಬಿಡಬೇಕು ಎಂಬ ಇಚ್ಛೆಯಿಂದ ಮತ್ತು ಸಂಪೂರ್ಣ ನಂಬಿಕೆಯಿಂದ ಬೆಳಕಿನ ಮೊರೆಹೋಗುತ್ತಾನೆ. ಅದಕ್ಕೆ ಬೆಳಕು ಪ್ರತಿಸ್ಪಂದಿಸುತ್ತದೆ. ಇಂಥ ಕಠಿಣ ಸಂದರ್ಭಗಳಲ್ಲಿ ಬೆಳಕನ್ನು ಬಳಸಿಕೊಳ್ಳುವುದರಿಂದ ಪವಾಡಸದೃಶ ಫಲಿತಾಂಶ ಪಡೆಯಬಹುದು. ಬೆಳಕಿನೊಂದಿಗಿನ ನಮ್ಮ ಅತ್ಯಂತ ಸುಂದರವಾದ ಬಾಂಧವ್ಯವನ್ನು ಅನ್ವೇಷಿಸಲು ಮತ್ತು ಅದರ ಅರಿವನ್ನು ಮೂಡಿಸಲು ಶಾಲಾ ಮಕ್ಕಳು ನಮ್ಮನ್ನು ಉತ್ತೇಜಿಸುತ್ತಾರೆ.
- ಲೈಟ್ ಚಾನಲ್ ಕಾರ್ಯಕ್ರಮದಲ್ಲಿ ಭಾಗವಹಿಸುವ ಶಾಲೆಗಳ ಸಂಖ್ಯೆಯು ನಿಧಾನವಾಗಿ ಹೆಚ್ಚುತ್ತಿದೆ. ಸುಮಾರು 700 ಶಾಲೆಗಳಲ್ಲಿ ಮಕ್ಕಳು ಪ್ರತಿದಿನ ಶಾಲಾಪ್ರಾರ್ಥನೆಯ ಸಮಯದಲ್ಲಿ ಲೈಟ್ ಚಾನಲ್ ಮಾಡುತ್ತಾರೆ. ■

## ಲೈಟ್ ಚಾನಲಿಂಗ್ ಅನುಭವಗಳು

ನನ್ನ ತಂದೆ ಮದ್ಯಪಾನ ವ್ಯಸನಿಯಾಗಿದ್ದರು. ನಾನು ಲೈಟ್ ಚಾನಲ್ ಮಾಡಲಾರಂಭಿಸಿದೆ. ಈಗ ಅವರು ಮದ್ಯಪಾನ ಮಾಡುವುದನ್ನು ನಿಲ್ಲಿಸಿದ್ದಾರೆ.

– ವಿನೀತ್, 6ನೇ ತರಗತಿ, ದೇವರಾಯಮ್ಮಲ್ ತಮಿಳು ಪ್ರೈಮರಿ ಶಾಲೆ, ಬೆಂಗಳೂರು

ನನ್ನ ತಂದೆಗೆ ಬಹಳ ಸಾಲವಿತ್ತು. ಅದಕ್ಕಾಗಿ ನಾನು ಬೆಳಕನ್ನು ಬೇಡಿಕೊಂಡೆ. ಈಗ ಆ ಸಾಲಗಳೆಲ್ಲ ತೀರಿವೆ.

– ಪ್ರಶಾಂತ್, 7ನೇ ತರಗತಿ, ದೇವರಾಯಮ್ಮಲ್ ತಮಿಳು ಪ್ರೈಮರಿ ಶಾಲೆ, ಬೆಂಗಳೂರು

ಬೆಳಕನ್ನು ಚಾನಲ್ ಮಾಡುವುದರಿಂದ ಶಾಂತತೆಯ ಅನುಭವವಾಗುವುದು ನಿಶ್ಚಿತ. ಇದು ನನಗೆ, ನನ್ನ ಒತ್ತಡಗಳಿಂದ ಹೊರಬಂದು, ವೈಯಕ್ತಿಕ ಸಮಸ್ಯೆಗಳನ್ನೆಲ್ಲಾ ಮರೆತು ಹೆಚ್ಚು ಪರಿಣಾಮಕಾರಿಯಾಗಿ ಶಾಲಾ ಕಾರ್ಯಗಳನ್ನು ಮಾಡಲು ಸಹಕರಿಸುತ್ತದೆ. ಅನೇಕ ಸಂದರ್ಭಗಳಲ್ಲಿ ಬೆಳಕಿಗೆ ಹೀಲಿಂಗ್ ಶಕ್ತಿ ಇದೆ ಎಂದು ನನಗನಿಸಿದೆ. ಬೆಳಕಿನಿಂದಾಗಿ ನನ್ನ ಮೊಣಕಾಲು ನೋವು ಕಡಿಮೆಯಾಗಿದೆ.

7–10 ನಿಮಿಷಗಳ ಕಾಲ, ನಮ್ಮ ದೇಹದೊಳಗೆ ಮತ್ತು ಸಮಸ್ತ ವಿಶ್ವಕ್ಕೆ ಹರಡುವ ದೈವೀ ಬೆಳಕಿನ ಚಾನಲಿಂಗ್ ಪ್ರಕ್ರಿಯೆ ಮಾನಸಿಕ, ಭೌತಿಕ ಮತ್ತು ನೈಸರ್ಗಿಕವಾಗಿ ಹೆಚ್ಚಿನ ಪ್ರಮಾಣದಲ್ಲಿ ಸಕಾರಾತ್ಮಕತೆಯನ್ನು ಉಂಟುಮಾಡಿದೆ. ಇದು, ನಾವು ಬದುಕಲು ಪ್ರಪಂಚವನ್ನು ಒಂದು ಉತ್ತಮ ಸ್ಥಳವನ್ನಾಗಿಸಿದೆ.

– ಶ್ರೀಮತಿ ತಾರಾ ಮಂಜುನಾಥ್, ಶಿಕ್ಷಕಿ, ಅಚಲ ವಿದ್ಯಾ ಮಂದಿರ ಪ್ರೌಢ ಶಾಲೆ, ಬೆಂಗಳೂರು

## ತಪೋನಗರ ಡೈರಿ

**ಸೀಮಾ ಅಲ್‌ವೇಲ್ ಸೋಮಯಾಜಿ; ಅನು: ಪಾಂಡುರಂಗ**

ಅನೇಕ ರೀತಿಗಳಲ್ಲಿ ಡಿಸೆಂಬರ್ 2011 ತಿಂಗಳು ವಿಶೇಷವಾಗಿತ್ತು. ಜೋಡಿ ಗ್ರಹಣಗಳಲ್ಲಿ ಎರಡನೆಯದು, ಐದು ಘಂಟೆಗಳ ಲೈಟ್ ಚಾನಲಿಂಗ್ ಕಾರ್ಯಕ್ರಮವಾಗಿತ್ತು. ತಪೋನಗರ, ನಗರದ ಹೊರವಲಯದಲ್ಲಿರುವುದರಿಂದ ಚಳಿ ಹೆಚ್ಚಾಗಿರುತ್ತದೆ; ಅದೃಷ್ಟವಶಾತ್ ಆದಿನ ಚಳಿ ಅಷ್ಟು ತೀವ್ರವಾಗಿರಲಿಲ್ಲ. ನಂತರದ ದಿನಗಳಲ್ಲಿ ಚಳಿಗಾಲ ತನ್ನ ಬಲವನ್ನು ಪ್ರದರ್ಶಿಸಿತು.

ಕ್ರಿಸ್‌ಮಸ್ ದಿನವಾದ 25ನೇ ಡಿಸೆಂಬರ್, ಬೆಳಿಗ್ಗೆ 6 ರಿಂದ ಸಂಜೆ 6 ರವರೆಗೆ ದಿನವಿಡೀ ಧ್ಯಾನ ಮಾಡುವ 'ಅಖಂಡ ಧ್ಯಾನ'ಕ್ಕೆ ಗೊತ್ತುಪಡಿಸಿರುವ ವರ್ಷದ ಕೊನೆಯ ಭಾನುವಾರವೂ ಆಗಿತ್ತು. ಅದು 'ರಿಲೆ' ರೀತಿಯಲ್ಲಿ ನಡೆಯಿತು. ಸೂರ್ಯೋದಯಕ್ಕೆ ಮುಂಚೆ ಪ್ರಾರಂಭಗೊಂಡ ಸಮಯದಲ್ಲೇ ಬಹಳಷ್ಟು ನಿವಾಸಿಗರು ಹಾಜರಿದ್ದರು, ಮೂರು ಘಂಟೆಗಳ ನಂತರ ನಗರದಿಂದ ವಿದ್ಯಾರ್ಥಿಗಳು ಬರಲು ಪ್ರಾರಂಭಿಸಿದರು. ಮಧ್ಯಾಹ್ನವಾಗುತ್ತಿದ್ದಂತೆ, ಭಾನುವಾರಗಳಂದು ಬರುವ ವಿದ್ಯಾರ್ಥಿಗಳು ಲೈಟ್ ಚಾನಲಿಂಗ್ ಮಾಡುತ್ತಾ ಮುಂಜಾನೆಯಿಂದ ಚಾನಲಿಂಗ್ ಮಾಡುತ್ತಿದ್ದವರಿಗೆ ಬೇಕಾಗಿದ್ದ ವಿರಾಮವನ್ನು ನೀಡಿದರು. ಮಧ್ಯಾಹ್ನ 12 ಘಂಟೆಗೆ ಕ್ರಿಸ್ತರ ಆಶೀರ್ವಾದಗಳನ್ನು ಪಡೆದೆವು. ಮುಕ್ತಾಯದ ಸಮಯದಲ್ಲೂ ಅನೇಕ ಧ್ಯಾನಿಗಳಿದ್ದು ಆ ದಿನವನ್ನು ಯಶಸ್ವಿಗೊಳಿಸಿದರು.

ಈ ತಿಂಗಳ ನಿವಾಸಿಗಳ ಸಭೆ ತುಂಬ ಅತ್ಯಾಸಕ್ತಿಯಿಂದ ಕೂಡಿತ್ತು. ನೆರೆದಿದ್ದವರಲ್ಲಿ ಪರಸ್ಪರ ಸಹಬಾಳ್ವೆಯ ಪ್ರಾಮುಖ್ಯತೆಯನ್ನು ಗುರೂಜಿಯವರು ಮತ್ತೊಮ್ಮೆ ಪುನರುಚ್ಚರಿಸಿದರು.

ಹೊಸವರ್ಷದ ಸಂತೋಷಕೂಟ ತುಂಬ ಸುಂದರವಾಗಿತ್ತು. ಬಹಳ ಜನರು ಮಾತನಾಡಿದರು ಮತ್ತು ತಮಗೆ 2011 ಹೇಗಿತ್ತು ಎಂಬುದನ್ನು ಒಂದೆರಡು ಸಾಲುಗಳಲ್ಲಿ ಚಿಕ್ಕದಾಗಿ ಹೇಳುವುದರಲ್ಲಿ ಸಫಲರಾದರು. ಉತ್ಸಾಹಭರಿತ ಗುಂಪಾದ ಉಮಾ, ರಾಖಿ, ಶೀಲಾ ಮತ್ತು ಇತರರಿಂದ ವರ್ಣಮಯ ರಂಗೋಲಿ ರಚಿತವಾಗಿತ್ತು. ಗುರೂಜಿಯವರಿಂದ ವಿಧ್ಯುಕ್ತವಾಗಿ ದೀಪ ಹಚ್ಚಲಾಯಿತು. 2011ಕ್ಕೆ ಕೃತಜ್ಞತೆಗಳೊಂದಿಗೆ ವಿದಾಯ ಹೇಳಿ, 2012ನ್ನು ಆಶಾಭಾವ ಮತ್ತು ಗೌರವಾದರಗಳಿಂದ ಮೌನದಲ್ಲಿ ಸ್ವಾಗತಿಸಲಾಯಿತು. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.com ಗೆ ಬನ್ನಿ.

### ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

04-12-2011

ಈ ತರಗತಿಗಳು ಸಾಧಾರಣ ತರಗತಿಗಳಲ್ಲ. ಸೂಕ್ಷ್ಮಲೋಕದ ಅನೇಕ ಜೀವಿಗಳು, ಇಲ್ಲಿ ಉಪಸ್ಥಿತರಿರುವ ಋಷಿಗಳ ದರ್ಶನ ಪಡೆಯಲು ಬರುತ್ತಾರೆ. ಪ್ರತಿಯೊಂದು ತರಗತಿಯಲ್ಲಿ ಒಬ್ಬ ಮಾಸ್ಟರ್ ಹಾಗೂ ಕೆಲವೊಮ್ಮೆ ದೈವಿಕ ವ್ಯಕ್ತಿಗಳು ಉಪಸ್ಥಿತರಿರುತ್ತಾರೆ.

ಲೌಕಿಕ ಪ್ರಪಂಚದಲ್ಲಿ ಸ್ಪರ್ಧೆಯಿದೆ, ಬೆನ್ನಹಿಂದೆ ಪಿತೂರಿ ಮತ್ತು ಎಲ್ಲ ರೀತಿಯ ಕೆಟ್ಟತನಗಳಿವೆ. ಆಧ್ಯಾತ್ಮಿಕತೆ ಎಂದರೆ ವಾಸ್ತವವಾಗಿ ಬದುಕುವುದು. ಎಷ್ಟು ಸಾಧ್ಯವೋ ಅಷ್ಟು ಆಧ್ಯಾತ್ಮಿಕವಾಗಿ ಬಾಳಿ, ನಂತರ ಈ ಪ್ರಪಂಚದೊಂದಿಗೆ ಮತ್ತು ಅದರ ರೀತಿ ನೀತಿಗಳೊಂದಿಗೆ ಹೊಂದಿಕೊಂಡು ಹೋಗಿ. ನೀವು ಸಂದರ್ಭ, ಸನ್ನಿವೇಶಗಳನ್ನು ಅಭ್ಯಾಸಮಾಡಿ, ನಂತರ ನಿರ್ಧಾರ ಕೈಗೊಳ್ಳಬೇಕು. ಬೆಳಕನ್ನು ಯಾವಾಗಲೂ ಹೊಂದಿರಿ. ಬೆಳಕು ಆಧ್ಯಾತ್ಮಿಕವಾಗಿ ಬದುಕಲು ಸಹಾಯ ಮಾಡುತ್ತದೆ. ಎಂದಾದರೊಂದು ದಿನ ಒಂದು ಸ್ವಚ್ಛ ಸಮಾಜ ಉದಯವಾಗುತ್ತದೆ. ನಾವು ಕೆಲಸ ಮಾಡುವ ಸ್ಥಳ ಬಹಳ ಆನಂದಮಯವಾಗಿರುತ್ತದೆ. ನಾವು ಸತ್ಯಯುಗ ಸಂಪೂರ್ಣವಾಗಿ ಬರುವುದಕ್ಕೆ ಬಹಳ ತಾಳ್ಮೆಯಿಂದ ಕಾಯಬೇಕು, ಕೊನೆಯ ಪಕ್ಷ ನಾವು ನಿರೀಕ್ಷಿಸಿದಂತೆ ಈ ವ್ಯವಸ್ಥೆಗಳೆಲ್ಲ ಕುಸಿದು ಬೀಳುವ ವರ್ಷ 2012 ಮುಗಿಯುವ ತನಕ ಕಾಯಬೇಕು.

ಧ್ಯಾನಾಭ್ಯಾಸದ ಅವಧಿಯಲ್ಲಿ ಒಬ್ಬ ಧ್ಯಾನಿ ವಿಸ್ತಾರತೆಯನ್ನು ಮತ್ತು ಒಂದು ರೀತಿಯ ಸಂಕೋಚನವನ್ನು ಅನುಭವಿಸಿದರು. ಅನೇಕರು ಇಂಥ ಅನುಭವವನ್ನು ಪಡೆದಿರಬಹುದು, ಆದರೆ ಗಮನಿಸಿರುವುದಿಲ್ಲ. ಈ ವಿಶ್ವದಲ್ಲಿ ನಡೆಯುವ ವಿಸ್ತಾರತೆ ಮತ್ತು ಸಂಕೋಚನಗಳಂಥ ಅನೇಕ ಪ್ರಕ್ರಿಯೆಗಳು ನಮ್ಮೊಳಗೆ ಕೂಡಾ ಆಗುತ್ತವೆ ಎಂಬುದನ್ನು ನಾನು ಮನಗಂಡಿದ್ದೇನೆ. ಇವುಗಳನ್ನು ಒಬ್ಬ ಮಹಿಳೆ ಅನುಭವಿಸಿದ್ದಾರೆ. ಇದೊಂದು ಅದ್ಭುತ ಅನುಭವ.

ಒಮ್ಮೆ ಒಬ್ಬ ಚಿಕ್ಕ ವಯಸ್ಸಿನ ಮಹಿಳೆ ನಡೆಯುತ್ತಿರುವಾಗ ಒಂದು ಅನುಭವವಾಯಿತು. ಅವರು ಎಲ್ಲ ಜನರು ಮತ್ತು ತಾನು ಒಂದೇ ಎಂಬುದನ್ನು ಮನಗಂಡರು. ಅವರು ವೈಶಾಲ್ಯತೆಯನ್ನು ಅನುಭವಿಸಿದರು. ಹಿಂದಿನ ಜನ್ಮಗಳಿಂದ ಬಂದ ಈ ವಿವೇಕ ಆಕೆಯ ಮನಸ್ಸಿನ ಸುಪ್ತಭಾಗದಲ್ಲಿ ಇತ್ತು. ಮನಸ್ಸು ಈ ಅಂಶವನ್ನು ತೆಗೆದುಕೊಂಡು ಆಕೆಗೆ ಒಂದು ರೀತಿಯ ಉಡುಗೊರೆಯಾಗಿ ನೀಡಿತು. ಇದೊಂದು ಅತ್ಯಂತ ಸುಂದರವಾದ ಪ್ರಕ್ರಿಯೆ.

ದೇಹ, ಮನಸ್ಸು ಮತ್ತು ಬುದ್ಧಿಗಳು ತಮ್ಮದೇ ಸ್ವತಂತ್ರ ಬುದ್ಧಿಶಕ್ತಿ, ಅಭಿಮತ ಮತ್ತು ಭಾವನೆಗಳನ್ನು ಹೊಂದಿರುತ್ತವೆ. ಅವುಗಳಿಗೆ ನಮ್ಮ ಬಗ್ಗೆ ಸಂತೋಷವೆನಿಸಿದರೆ, ಅವು ತಮ್ಮ ಸಂತೋಷವನ್ನು ಅಭಿವ್ಯಕ್ತ ಪಡಿಸುತ್ತವೆ. ಇದ್ದಕ್ಕಿದ್ದಂತೆ ಯಾವ ಕಾರಣವೂ ಇಲ್ಲದೆ ಒಬ್ಬ ವ್ಯಕ್ತಿ ಉಲ್ಲಸಿತರಾದರೆ, ಅವರು ದೇಹವನ್ನು ಬಹಳ ಚೆನ್ನಾಗಿ ನೋಡಿಕೊಂಡಿದ್ದರ ಪರಿಣಾಮವಾಗಿ ಅದು ತನ್ನ ಸಂತೋಷ ವ್ಯಕ್ತಪಡಿಸುತ್ತಿದೆ ಎಂದು ನನಗೆ ತಿಳಿಯಿತು. ದೇಹವನ್ನೊಳಗೊಂಡು ಎಲ್ಲವನ್ನೂ ನಾವು ಪ್ರೀತಿಸಬೇಕು.

ಹೀಲಿಂಗ್ ಚೈತನ್ಯಗಳು ಹೀಲ್ ಮಾಡುತ್ತವೆ ಮತ್ತು ನೆಮ್ಮದಿ ತರುತ್ತವೆ. ಮೊದಲು ವ್ಯಕ್ತಿ ನಿರಾತಂಕಗೊಳ್ಳುತ್ತಾನೆ. ಈ ಚೈತನ್ಯಗಳು ಸಕಾರಾತ್ಮಗೊಳಿಸುತ್ತವೆ ಮತ್ತು ವ್ಯಕ್ತಿಯಲ್ಲಿ ಸ್ವಲ್ಪ ಮಟ್ಟಿಗೆ ಪರಿವರ್ತನೆ ತರುತ್ತವೆ. ಹೀಲಿಂಗ್ ಚೈತನ್ಯಗಳು ಕೆಟ್ಟ ಹವ್ಯಾಸಗಳನ್ನು ಹೋಗಲಾಡಿಸುತ್ತವೆ. ಅವು ನಮ್ಮನ್ನು ಸರಿಯಾದ ವೈದ್ಯರ ಬಳಿಗೆ ಹೋಗಲು ಮಾರ್ಗದರ್ಶಿಸುವುದಲ್ಲದೆ, ಅವರ ಮೂಲಕ ಕೆಲಸ ಮಾಡುತ್ತದೆ. ಹೀಲಿಂಗ್ ಚೈತನ್ಯಗಳು ನಾನಾ ರೀತಿಗಳಲ್ಲಿ ಕೆಲಸ ಮಾಡುತ್ತವೆ.

ನಾವು ಬೆಳಕನ್ನು ಅನುಭವಿಸಲು ಪ್ರಾರಂಭಿಸಿದಾಗ, ಹೊಸಯುಗದ ಚೈತನ್ಯಗಳನ್ನು ಅನುಭವಿಸುತ್ತೇವೆ. ಇವು ಚಕ್ರಗಳನ್ನು ಸಚೇತನಗೊಳಿಸುತ್ತವೆ, ಕುಂಡಲಿನಿಯನ್ನು ಉದ್ದೀಪನಗೊಳಿಸುತ್ತವೆ, ಕರ್ಮಗಳನ್ನು ಹೋಗಲಾಡಿಸಿ ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಧ್ಯಾನ ಮಾಡುವಾಗ, ಈ ಚೈತನ್ಯಗಳು ನಮ್ಮ ಮೂಲಕ ಕೆಲಸ ಮಾಡಲು ಅನುಮತಿಸುತ್ತೇವೆ ಮತ್ತು ಉಳಿದೆಲ್ಲವನ್ನೂ ಅವು ಮಾಡುತ್ತವೆ.

ದೇಹದೊಳಗೆ ಆತ್ಮ ಪ್ರತಿನಿತ್ಯ ಆನಂದಮಯ ಕೋಶದಿಂದ ಸಹಸ್ರಾರದವರೆಗೆ ನಿಧಾನವಾಗಿ ಪ್ರಯಾಣಿಸುತ್ತದೆ. ಮಧ್ಯಾಹ್ನ 12 ಘಂಟೆಯಲ್ಲಿ ಅದು ಸಹಸ್ರಾರದಲ್ಲಿದ್ದು, ದೇಹ, ಮನಸ್ಸು ಮತ್ತು ಬುದ್ಧಿಯನ್ನೊಳಗೊಂಡ ಶರೀರ ವ್ಯವಸ್ಥೆ ಚೆನ್ನಾಗಿ ಕಾರ್ಯ ನಿರ್ವಹಿಸುವಲ್ಲಿ ವಿಶೇಷ ಗಮನವನ್ನು ಕೊಡುತ್ತದೆ. ನಮ್ಮ ಚೈತನ್ಯಗಳು ಮತ್ತು ನಮ್ಮ ಕೆಲಸದ ದಕ್ಷತೆ ಮಧ್ಯಾಹ್ನ 12 ಘಂಟೆಯಲ್ಲಿ ಅತ್ಯುನ್ನತವಾಗಿರುತ್ತವೆ. ರಾತ್ರಿ 12 ಘಂಟೆಯಲ್ಲಿ ಆತ್ಮ ಆನಂದಮಯ ಕೋಶದಲ್ಲಿದ್ದು ನಮ್ಮ ಆಧ್ಯಾತ್ಮಿಕ ಭಾಗದ ನಿರ್ವಹಣೆಯನ್ನು ಮತ್ತು ಆಗ ನಮ್ಮ ಶರೀರ ವ್ಯವಸ್ಥೆಯಲ್ಲಿ ಉಂಟಾಗುವ ಅನೇಕ ಪ್ರಕ್ರಿಯೆಗಳನ್ನು ನೋಡಿ ಕೊಳ್ಳುತ್ತದೆ. ಅವುಗಳನ್ನು ನಾವು ಇನ್ನೂ ಅರ್ಥ ಮಾಡಿಕೊಳ್ಳಬೇಕಾಗಿದೆ. ಇದೆಲ್ಲದರ ಮೇಲ್ವಿಚಾರಣೆ ಕೂಡಾ ಅದು ಮಾಡುತ್ತದೆ.

ಋಷಿಗಳು ಇಚ್ಛಾಶಕ್ತಿ ಕೆಲಸ ಮಾಡಲು ಹಾಗೂ ತಪ್ಪುಗಳನ್ನು ಮಾಡಲು ಕೂಡಾ ಅನುಮತಿಸುತ್ತಾರೆ. ನೀವು ಎಂದಾದರೂ ಒಂದು ಆಧ್ಯಾತ್ಮಿಕ ಗುರಿಯನ್ನು ಆಯ್ಕೆ ಮಾಡಿಕೊಂಡರೆ, ಇತರ ಗುರಿಗಳ ಬಗ್ಗೆ ಜಾಗರೂಕರಾಗಿರಬೇಕು ಮತ್ತು ಇವು ನಮ್ಮ ಆಧ್ಯಾತ್ಮಿಕ ಸಾಧನೆಗೆ ಸಹಾಯ ಮಾಡುವುದೇ ಎಂದು ತಿಳಿಯಬೇಕು. ಇದನ್ನು ಮನಗಾಣಬೇಕಾದರೆ ಮತ್ತು ಆಧ್ಯಾತ್ಮಿಕ ಮಾರ್ಗವನ್ನು ಆರಿಸಿಕೊಳ್ಳಲು ಅನೇಕ ಜನ್ಮಗಳು ಬೇಕಾಗುತ್ತವೆ. ಒಮ್ಮೆ ನಾವು ಋಷಿಗಳ ಬಳಿ ಬಂದರೆ, ನಮ್ಮ ಜೀವನದ ಗುರಿ ಆಧ್ಯಾತ್ಮಿಕವಾಗಿ ಮತ್ತು ಲೌಕಿಕವಾಗಿ ಎಲ್ಲದರಲ್ಲಿ ಪರಿಪೂರ್ಣವಾಗಿರುವುದು ಎಂಬುದನ್ನು ಅರಿಯುತ್ತೇವೆ.

11-12-2011

ನಾವು ನಿಶ್ಚಲತೆಯನ್ನು ಅನುಭವಿಸಬೇಕು. ನಿಶ್ಚಲತೆಯಲ್ಲಿ ನಾವು ದೈವದೊಂದಿಗೆ ಸಂಪರ್ಕ ಪಡೆಯುತ್ತೇವೆ; ನಂತರ ನಾವು ಶಾಂತಿಯಿಂದ, ಪ್ರೀತಿಯಿಂದ ಮತ್ತು ವಿಶ್ವಾತ್ಮಕವಾಗಿ ಬಾಳುತ್ತೇವೆ. ನಿಶ್ಚಲತೆಯಲ್ಲಿ ನಮ್ಮ ಅರಿವು ದೇಹ, ಮನಸ್ಸು ಮತ್ತು ಬುದ್ಧಿಯಿಂದ ಆಚೆಗೆ ಹೋಗುತ್ತದೆ. ಆಗ ನಾವು ಜ್ಞಾತ ಮತ್ತು ಅಜ್ಞಾತ ಸತ್ಯಗಳನ್ನು ಅನುಭವಿಸುತ್ತೇವೆ. ಯಾವುದೇ ನಕಾರಾತ್ಮಕತೆಗಳು, ಕಹಿ ಅಥವಾ ನೋವುಗಳು ಇರುವುದಿಲ್ಲ. ಎಲ್ಲವೂ ಆನಂದ, ಶಾಂತಿ ಮತ್ತು ಪ್ರೀತಿಯಿಂದ ತುಂಬಿರುತ್ತದೆ. ಆನಂದವನ್ನು ಅನುಭವಿಸಿದ ನಂತರ ಅದನ್ನು ಅಭಿವ್ಯಕ್ತಿಸಬೇಕು. ಆಗ ಮಾತ್ರವೇ ಈ ಕ್ರಿಯೆ ಸಂಪೂರ್ಣವಾಗುತ್ತದೆ. ನಮ್ಮ ದೈನಂದಿನ ಬದುಕಿನಲ್ಲಿ ನಾವು ಮೌನವನ್ನು ಅಭ್ಯಸಿಸಬೇಕು. ಇದು ಧ್ಯಾನದಲ್ಲಿ ನಿಶ್ಚಲತೆಯನ್ನು ಅನುಭವಿಸಲು ನಮಗೆ ಸಹಾಯ ಮಾಡುತ್ತದೆ. ಅವು ಪರಸ್ಪರ ನೆರವಾಗುತ್ತವೆ.

ನಾವು ಪ್ರಜ್ಞಾಪೂರ್ವಕವಾಗಿ ಸಕಾರಾತ್ಮಕತೆಯನ್ನು ಅಭ್ಯಾಸ ಮಾಡಬೇಕು. ನಕಾರಾತ್ಮಕ ಭಾವನೆಗಳು ಮತ್ತು ಯೋಚನೆಗಳು ನಮ್ಮ ಧ್ಯಾನಗಳ ಮೇಲೆ ಪ್ರಭಾವ ಬೀರುತ್ತವೆ. ಸಕಾರಾತ್ಮಕತೆ ಮತ್ತು ಧ್ಯಾನಗಳು ಒಂದಕ್ಕೊಂದು ಪೂರಕವಾಗಿರುತ್ತದೆ.

'ರಾ' ಮತ್ತು 'ಫೋಟಾನ್ ಬೆಲ್ಟ್'ನ ಚೈತನ್ಯಗಳು

## ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

ಅತ್ಯಂತ ಶಕ್ತಿಯುತವಾಗಿರುತ್ತವೆ. ಇಲ್ಲಿಯವರೆಗೆ ನಾವು ಅವುಗಳನ್ನು ಹೇಗೆ ಬಳಸಬೇಕೆಂದು ಸೂಚನೆಗಳನ್ನು ಕೊಟ್ಟಿಲ್ಲ. ಈ ಚೈತನ್ಯಗಳನ್ನು ಮನಬಂದಂತೆ ಉಪಯೋಗಿಸಬೇಡಿ, ಏಕೆಂದರೆ ನಿಮಗೆ ಸಮಸ್ಯೆಗಳು ಉದ್ಭವಿಸುತ್ತವೆ. 'ರಾ' ಗ್ರೂಪ್ ಸೂಚನೆಗಳನ್ನು ಪಾಲಿಸಿ.

ನಾನು ಯಾವಾಗಲೂ ಋಷಿಗಳನ್ನು ಸಂಪರ್ಕಿಸುವುದಕ್ಕೆ ಪ್ರೋತ್ಸಾಹಿಸುತ್ತೇನೆ. ಅದು ಸುಲಭವಲ್ಲ. ಸಂಪರ್ಕ ಸಾಧ್ಯವಿದ್ದ ಕಡೆ, ಜನರು ಕೇಳತಂದಿರುವ ಜ್ಞಾನ ಮತ್ತು ಸೂಚನೆಗಳ ನಿಖರತೆಯ ಮಟ್ಟ ಅತ್ಯಂತ ಕಡಿಮೆ ಇದೆ. ನೀವು ಯಾವಾಗಲಾದರೂ ಜ್ಞಾನ ಮತ್ತು ಸೂಚನೆಗಳನ್ನು ಪಡೆದಿರುವಿರಿ ಎಂದು ತಿಳಿದಾಗ ನನ್ನೊಂದಿಗೆ ಪರೀಕ್ಷಿಸಿಕೊಳ್ಳಿ. ಮನಸ್ಸು ಅನೇಕ ವಿಷಯಗಳನ್ನು ನಿಮಗೆ ತುಂಬುವುದರ ಬಗ್ಗೆ ಜಾಗರೂಕರಾಗಿರಿ.

'ಋಷಿ – ಸಂಪರ್ಕ' ಅಭ್ಯಾಸದಲ್ಲಿ ಯಾರಾದರೂ ನನ್ನ ಸಹಕಾರ ಅಪೇಕ್ಷಿಸಿದಲ್ಲಿ, ಆ ವ್ಯಕ್ತಿ ನನ್ನ ಹತ್ತಿರದಲ್ಲಿರಬೇಕು, ನನಗೆ ಅವರ ಬಗ್ಗೆ ಗೊತ್ತಿರಬೇಕು.

ಋಷಿಗಳು ನಮ್ಮನ್ನು ರಕ್ಷಿಸುತ್ತಾರೆ, ಆದರೆ ನಾವು ಅತ್ಯಂತ ಜಾಗರೂಕರಾಗಿರಬೇಕು. ಕಪ್ಪು ಜನರು ಋಷಿಗಳೆಂದು ಸೋಗುಹಾಕಿ ಸೂಚನೆಗಳು ಮತ್ತು ಮಾಹಿತಿಯನ್ನು ಕಳುಹಿಸಿರುವ ಅನೇಕ ಸಂದರ್ಭಗಳು ನನಗೆ ತಿಳಿದಿದೆ. ಅವರು ಕಪ್ಪು ಚೈತನ್ಯಗಳನ್ನು ಉದ್ದೇಶಪೂರ್ವಕವಾಗಿ ವೆಬ್‌ಸೈಟ್‌ಗಳಲ್ಲಿ ಚಿತ್ರಗಳ ರೂಪದಲ್ಲಿ ಕೂಡಾ ರವಾನಿಸುತ್ತಾರೆ.

ಅನೇಕ ಜನರು ನಾನು ಎಲ್ಲವನ್ನೂ ಒಳಹೊಕ್ಕು ನೋಡಬಲ್ಲೆ ಎಂಬುದನ್ನು ಮರೆತಿದ್ದಾರೆ. ನಾನು ಎಲ್ಲವನ್ನು ಮೇಲ್ವಿಚಾರಣೆ ಮಾಡುತ್ತೇನೆ. ನನಗೆ ಎಲ್ಲವೂ ಗೊತ್ತಿರುತ್ತದೆ.

ಒಬ್ಬ ವ್ಯಕ್ತಿ ಅಥವಾ ಒಂದು ಪ್ರಾಣಿ ಅಥವಾ ಒಂದು ವಸ್ತುವನ್ನು ನೀವು ಪ್ರೀತಿಸುವುದಾದರೆ, ಅವರ ಬಗ್ಗೆ ಯೋಚಿಸಿದರೆ ಅಷ್ಟೇ ಸಾಕು. ನೀವು ಬೆಳಕನ್ನು ಕಳುಹಿಸಬೇಕಾಗಿಲ್ಲ. ಪ್ರೀತಿ ತಲುಪುತ್ತದೆ. ಪ್ರೀತಿಯೇ ಬೆಳಕು. ಪ್ರೀತಿ ಹೀಲ್ ಮಾಡುತ್ತದೆ.

**18–12–2011**

ಬೆಳಕು ಹೊಂದಿರುವ ಪ್ರೀತಿ ಮತ್ತು ಶಾಂತಿಗಳನ್ನು ನೀವು ಅನುಭವಿಸುವ ಮುಖಾಂತರ ಬೆಳಕನ್ನು ಅನುಭವಿಸಲು ಪ್ರಾರಂಭಿಸಬೇಕು. ನೀವು ಬೆಳಕನ್ನು ನೋಡಲಾಗುವುದಿಲ್ಲ. ಅದು ಭೌತಿಕ ಬೆಳಕಲ್ಲ. ಎಂದಾದರೊಂದು ದಿನ ಮಿಂಚು ಹೊಳೆದಂತಾಗಿ, ಇನ್ನೊಂದು ಮಟ್ಟದಲ್ಲಿ ನೀವು ಬೆಳಕನ್ನು ನೋಡುವಿರಿ.

ನೀವು ನಿಮ್ಮ ಪ್ರಗತಿಯನ್ನು ಆತ್ಮಸಾಕ್ಷಿಯ ಕನ್ನಡಿಯ ಮುಂದೆ ನಿಂತು ಪರೀಕ್ಷಿಸಿಕೊಳ್ಳಬಹುದು. ಇಲ್ಲಿಂದ ಮುಂದೆ ನಾವು ಯಾವ ಪಶ್ಚಾತ್ತಾಪವಿಲ್ಲದೆ ಮುನ್ನಡೆಯಬಹುದು.

ಒಬ್ಬ ವ್ಯಕ್ತಿಯನ್ನು ವಿದ್ಯಾರ್ಥಿ ಎಂದು ಒಪ್ಪಿಕೊಳ್ಳುವುದು ಕೂಡಾ ದೀಕ್ಷೆ ಆಗಿದೆ. ಜನಗಳು ಕಷ್ಟಕರ ಎನಿಸಿದರೆ ಅಥವಾ ಸಾಧನೆಯ ಬಗ್ಗೆ ಗಂಭೀರವಾಗಿಲ್ಲವೆನಿಸಿದರೆ ಅಂಥವರನ್ನು ನಾವು ತಿರಸ್ಕರಿಸಬಹುದು. ಶೂನ್ಯ ಮಾಸದಲ್ಲಿ ನಮ್ಮ ಮೇಲ್ವಿಚಾರಣೆ ಮಾಡುತ್ತಿರುವ ಹೊಸ ಋಷಿಗಳಿಂದ ಬಂದಿರುವ ಹೊಸ ಮಾಹಿತಿ ಇದು.

ಪ್ರಮಾಣಗಳು ನಾವು ಸಾಕಾರಗೊಳಿಸಬಯಸುವ ಮೂಲ ಸತ್ಯಗಳಾಗಿವೆ. ಇದಕ್ಕೆ ಅತ್ಯುತ್ತಮ ಉದಾಹರಣೆ ಎಂದರೆ "ಅಹಂ ಬ್ರಹ್ಮಾಸ್ಮಿ" ಸಂಸ್ಕೃತದಲ್ಲಿ ಇದರ ಅರ್ಥ, "ನಾನು ದೇವರು". ಪ್ರಮಾಣಗಳು ಜಪವಲ್ಲ, ಅದಕ್ಕಿಂತಲೂ ಹೆಚ್ಚು. ಅದೊಂದು ಪರಿಶುದ್ಧ ಉದ್ದೇಶ, ಅಪರೂಪಕ್ಕೆ ಸಾಕಾರಗೊಳ್ಳುತ್ತದೆ, ಆದ್ದರಿಂದ ನಾವು ಮೊದಲು ಒಂದು ಚೈತನ್ಯವಲಯವನ್ನು ನಿರ್ಮಿಸಬೇಕು. ನಂತರ ಆ ಪ್ರಮಾಣವನ್ನು ಪುನರಾವರ್ತನೆ ಮಾಡುವುದರಿಂದ ಬಲಪಡಿಸಬೇಕು, ಅದನ್ನು ಸಾಕಾರಗೊಳಿಸಲು ನಮ್ಮಲ್ಲಿ ದೃಢತೆಯನ್ನು ಬೆಳೆಸಿಕೊಳ್ಳಬೇಕು.

ಕೆಲವು ಸಲ ಪ್ರಮಾಣಗಳು ನಮ್ಮನ್ನು ಒಂದು ರೀತಿಯ ಭಾವ ಸಮಾಧಿಯತ್ತ ಮುನ್ನಡೆಸುತ್ತವೆ. ನಾವು ಬೆಳಕು ಎಂದು ತಿಳಿದರಷ್ಟೇ ಸಾಕು, ನಾವು ಆ ರೀತಿಯ ಬೆಳಕನ್ನು ಪ್ರವೇಶಿಸುತ್ತೇವೆ. ಅದೊಂದು ರೀತಿಯ ಭಾವ ಸಮಾಧಿ.

ಊಹಾಚಿತ್ರಣ ಬಹಳ ಮುಖ್ಯ. ನಾವು ಊಹಾ ಚಿತ್ರಣ ಮಾಡಿಕೊಳ್ಳುವಾಗ ಮನೋ–ವಸ್ತುವನ್ನು ಸೃಷ್ಟಿಸುತ್ತೇವೆ. ಆಗ ಅದು ನಿಜವಾಗುತ್ತದೆ. ಊಹಾ ಚಿತ್ರಣ ಸೃಷ್ಟಿ ಪ್ರಕ್ರಿಯೆಯ ಒಂದು ಭಾಗ.

2011, ಅನೇಕ ಪ್ರಾರಂಭಗಳ ವರ್ಷವಾಗಿತ್ತು. ಅದು ಹಗರಣಗಳು ಮತ್ತು ನಮ್ಮ ಕುಂದುಕೊರತೆಗಳಂತಹ ವಾಸ್ತವತೆಗಳನ್ನು ಈಚೆಗೆ ತಂದ ವರ್ಷವಾಗಿತ್ತು. ನಮ್ಮ ಕುಂದುಕೊರತೆಗಳನ್ನು ಒಪ್ಪಿಕೊಳ್ಳುವುದು ಬಹಳ ಮುಖ್ಯ. ಅದರಿಂದ ಹೊರಬರಲು ಪ್ರಯತ್ನಿಸಬೇಕು, ಹೋರಾಡಬೇಕು. ಪ್ರಜ್ಞೆಯಲ್ಲಿ ಅನೇಕ ಬದಲಾವಣೆಗಳಿದ್ದವು. ನಾವು ಪಡೆದ ಜ್ಞಾನದಲ್ಲಿ ಅನೇಕ ವಿಕೃತಾಂಶಗಳನ್ನು ಋಷಿಗಳು ತೆಗೆದುಹಾಕಿದರು. 2012ರ ಬಗ್ಗೆ ಸ್ಪಷ್ಟವಾದ ಮಾರ್ಗದರ್ಶನಗಳನ್ನು ಪಡೆದೆವು. ಈ ವರ್ಷ ಲೈಟ್ ಚಾನಲ್ಸ್ ಸಂಚಲನ ವಿಸ್ತಾರಗೊಂಡುದನ್ನು ಕಂಡಿತು. ಮುಂದೆ ಅದ್ಭುತ ಕ್ರಾಂತಿಗಳು ನಡೆಯಲಿವೆ. ನಮ್ಮಲ್ಲಿ ಪ್ರತಿಯೊಬ್ಬರೂ ಈ ಸಂಚಲನವನ್ನು ಹರಡಲು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಬೇಕು.

2012, ಅನೇಕ ಘಟನಾವಳಿಗಳ ವರ್ಷವಾಗಿದೆ. ಕಳೆದ ವರ್ಷ ಪ್ರಾರಂಭವಾದ ಇನ್ನೂ ಮುಗಿಯದಿರುವ, ಪ್ರಳಯದ ಪ್ರಕ್ರಿಯೆಗಳು ಮುಂದುವರಿಯುತ್ತದೆ. ನಾವು ಒಳ್ಳೆಯವರಾಗಿ ಮತ್ತು ಪ್ರಾಮಾಣಿಕರಾಗಿ ಇರಬೇಕೆಂಬುದನ್ನು ಆಯ್ಕೆ ಮಾಡಿಕೊಳ್ಳಬೇಕು. ಈ ಆಯ್ಕೆಯೊಂದಿಗೆ ನಾವು ಹೊಸಯುಗವನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ಈಗಾಗಲೇ ಆಯ್ಕೆ ಮಾಡಿಕೊಂಡವರಿಗೆ ಮುಂದಿನ ಮಾರ್ಗದರ್ಶನ ಮಾಡಲಾಗುತ್ತದೆ. ಪ್ರತಿಯೊಬ್ಬರನ್ನೂ ರಕ್ಷಿಸಲಾಗುತ್ತದೆ. ಇನ್ನೂ ಆಯ್ಕೆ ಮಾಡಿಕೊಳ್ಳದವರಿಗೆ, ಈಗಲೂ ಅವಕಾಶಗಳಿವೆ. ಎಲ್ಲ ಹಂತಗಳಲ್ಲಿ ಎಲ್ಲಾ ಸಕಾರಾತ್ಮಕ ಚೇತನಗಳ ಕ್ರೋಢೀಕರಣವೇ 2012ನೇ ವರ್ಷ. ಹೊಸ ಜಾಗೃತಿಗಳು ಮತ್ತು ಹೆಚ್ಚು ಹೆಚ್ಚು ಜಾಗೃತಿಗಳು ಉಂಟಾಗುತ್ತವೆ. ನಾವು ಹಿಂದೆಂದೂ ಓದಿರದ, ಕೇಳಿರದ ಅತ್ಯುನ್ನತ ಅನುಭವಗಳನ್ನು ಅನುಭವಿಸುತ್ತೇವೆ. ತಮ್ಮನ್ನು ತಾವು ದೈವತ್ವಕ್ಕೆ ಹೊಂದಿಸಿಕೊಂಡವರಲ್ಲಿ ತಾವು ನಂಬಿದುದನ್ನು ಸಾಧಿಸಲು ಬೇಕಾದ ಶಾಂತಿ, ತಾಳ್ಮೆ ಮತ್ತು ಧೈರ್ಯ ಇರುತ್ತದೆ.

ನಾವು ಋಷಿಯೊಬ್ಬರನ್ನು ಆಹ್ವಾನಿಸುವ ಮೊದಲು ಎಚ್ಚರವಹಿಸಬೇಕು. ಇವರು ಸೃಷ್ಟಿಯ ಕಾರ್ಯನಿರ್ವಹಣೆಯಲ್ಲಿ ತೊಡಗಿದ್ದಾರೆ ಎಂಬ ವಿಷಯದ ಬಗ್ಗೆ ನಮಗೆ ತಿಳಿದಿಲ್ಲ, ಅರ್ಥ ಮಾಡಿಕೊಳ್ಳಲಾಗುವುದಿಲ್ಲ.

ನೀವು ಧ್ಯಾನವನ್ನು, ಬೆಳಕನ್ನು ಅನುಭವಿಸುವುದನ್ನು ಯಾಂತ್ರಿಕವಾಗಿ ಅಭ್ಯಾಸ ಮಾಡುವುದರಿಂದ, ನೀವು ಕೋಪಗೊಳ್ಳುವಿರಿ. ನೀವು ಶಂಬಲ ನಿಯಮಗಳಲ್ಲಿ ಮೊದಲನೆಯದನ್ನು ಪ್ರಾಮಾಣಿಕವಾಗಿ ಅಭ್ಯಾಸ ಮಾಡಿದರೆ, ನೀವು ತಾಳ್ಮೆಯನ್ನು ಕಳೆದುಕೊಳ್ಳುವುದಿಲ್ಲ. ನೀವು ಆರೋಗ್ಯವಾಗಿ ಇಲ್ಲದಿದ್ದಾಗಲೂ ಕೂಡಾ ಇದನ್ನು ಅಭ್ಯಾಸ ಮಾಡಬಹುದು. ಇಲ್ಲಿ ನಾವು ನಮ್ಮೊಳಗೆ ಇರುವ ದೇವರ ಪರಿಶುದ್ಧ ಚೈತನ್ಯಗಳ ಸಹಾಯವನ್ನು ಪಡೆಯುತ್ತೇವೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 2000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 1000/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಅಮರ

ಶ್ಯಾಮಲಾದೇವಿ

ಅಮರರವರು ಒಬ್ಬ ಅಸಾಮಾನ್ಯ ವ್ಯಕ್ತಿಯಾಗಿದ್ದರು. ಅವರು ಸಪ್ತಋಷಿಗಳೊಂದಿಗೆ ಕೆಲಸ ಮಾಡುತ್ತಿದ್ದರು. ಸ್ವತಃ ಅಮರರೇ ಒಬ್ಬ ಶ್ರೇಷ್ಠ ಋಷಿಯಾಗಿದ್ದರು. ವಿಶ್ವದ ಯಾವುದೇ ಭಾಗಕ್ಕೆ ಅವರು ತಮ್ಮ ಸೂಕ್ಷ್ಮ ಶರೀರದಲ್ಲಿ ಹೋಗಬಲ್ಲವರಾಗಿದ್ದರು.

ವ್ಯಕ್ತಿಗಳ ಹಿಂದಿನ ಮತ್ತು ಮುಂಬರುವ ಎಲ್ಲ ಜೀವನಗಳನ್ನು ಒಂದೇ ನೋಟದಲ್ಲಿ ಅರಿಯಬಲ್ಲವರಾಗಿದ್ದರು ಮತ್ತು ನಿಖರವಾಗಿ ಮಾರ್ಗದರ್ಶಿಸಬಲ್ಲವರಾಗಿದ್ದರು. ಯಾವುದೇ ಸಮಯದಲ್ಲೂ ಅವರು ತಮ್ಮ ಆಧ್ಯಾತ್ಮಿಕ ಶಕ್ತಿಗಳನ್ನು ಪ್ರದರ್ಶಿಸುತ್ತಿರಲಿಲ್ಲ. ಅವರ ಬಳಿ ಹೋಗುತ್ತಿದ್ದ ಎಲ್ಲರ ಲೌಕಿಕ ಅಗತ್ಯಗಳು ಹಾಗೂ ಆಧ್ಯಾತ್ಮಿಕ ಸಮಸ್ಯೆಗಳಿಗೆ ಅವರು ಸದ್ದಿಲ್ಲದೆ ಗಮನಕೊಡುತ್ತಿದ್ದರು.

ಎಂಥ ಪ್ರಶ್ನೆಗೂ ಉತ್ತರಿಸುತ್ತಿದ್ದ ಅವರ ಸಾಮರ್ಥ್ಯದಿಂದ ವಿಸ್ಮಿತನಾದ ಒಬ್ಬ ವ್ಯಕ್ತಿ, ಅವರಿಗೆ ಹೇಗೆ ಎಲ್ಲ ಕ್ಷೇತ್ರಗಳಲ್ಲಿಯೂ ಪರಿಣತಿ ಇದೆ ಎಂದು ಅಮರರನ್ನು ಕೇಳಿದ. ಆಗ ಅಮರರು, “ನನಗೆ ಉತ್ತರಗಳು ಗೊತ್ತಿಲ್ಲ ಆದರೆ ಎಲ್ಲವೂ ಗೊತ್ತಿರುವ ಋಷಿಗಳು ನನಗೆ ಗೊತ್ತು. ಅವರ ಮುಂದೆ ನಾನು ಪ್ರಶ್ನೆಯನ್ನು ಇಡುತ್ತೇನೆ, ಅವರು ನನ್ನ ಮೂಲಕ ಉತ್ತರಿಸುತ್ತಾರೆ,” ಎಂದು ಹೇಳಿದರು. ಒಂದು ಸಂದರ್ಭದಲ್ಲಿ ಅಮರರವರು ಋಷಿಗಳ ಬಗ್ಗೆ ಮಾತನಾಡುತ್ತಿದ್ದಾಗ ಒಬ್ಬ ಹೆಸರಾಂತ ಸಂಶಯವಾದಿ ಉಪಸ್ಥಿತರಿದ್ದರು. ಇಂಥ ಸಂಶಯವಾದಿ ಕೂಡ, “ಈ ವ್ಯಕ್ತಿ ಹೇಳುತ್ತಿರುವುದರಿಂದ, ಇವರು ಹೇಳಿದುದೆಲ್ಲವೂ ಸತ್ಯವಿರಬೇಕು,” ಎಂದರು. ಅಮರರ ವ್ಯಕ್ತಿತ್ವ ಅಂಥದು!

ಮನುಕುಲಕ್ಕೆ ಅವರು ನೀಡಿದ ಕೊಡುಗೆಗಳಲ್ಲಿ ಅತ್ಯಂತ ಮುಖ್ಯವಾದುದು ‘ಶಂಬಲ ನಿಯಮಗಳು’. ಈ ಅಭ್ಯಾಸದಿಂದ ಮಾನವ ದೈವತ್ವಕ್ಕೇರುತ್ತಾನೆ. ಅಷ್ಟೇ ಮುಖ್ಯವಾದ ಇನ್ನೊಂದು ಕೊಡುಗೆಯಾದ ಬೆಳಕಿನ ಸಂಚಲನದಿಂದ ಬೆಳಕು ಎಲ್ಲೆಡೆ ಹರಡಿ ಇಡೀ ಮನುಕುಲ ದೈವತ್ವಕ್ಕೆ ತೆರೆದುಕೊಳ್ಳುವಲ್ಲಿ ನೆರವಾಗುತ್ತದೆ.

ಅವರು ಆಧ್ಯಾತ್ಮಿಕತೆಗೆ ಹೊಸ ಅರ್ಥ ನೀಡಿದರು. “ಆಧ್ಯಾತ್ಮಿಕತೆ ಎಂದರೆ ಪ್ರಾಮಾಣಿಕರಾಗಿರುವುದು, ಒಳ್ಳೆಯವರಾಗಿರುವುದು, ದೇವರೊಂದಿಗೆ ಶ್ರುತಿಗೊಂಡಿರುವುದು, ಈ ಜೀವನವನ್ನು ಪೂರ್ಣವಾಗಿ ಬದುಕುವುದು ಮತ್ತು ಅನುಭವಿಸುವುದು” ಎಂದು ಅವರು ಹೇಳಿದರು. ಧ್ಯಾನಕ್ಕೆ ಸಂಬಂಧಿಸಿದ ಎಲ್ಲ ಜ್ಞಾನವನ್ನೂ ಸಂಪೂರ್ಣವಾಗಿ ಕೆಳತಂದ ಈ ವ್ಯಕ್ತಿಯೇ ಹೀಗೆ ಹೇಳಿದರು, “ಆಧ್ಯಾತ್ಮಿಕ ವ್ಯಕ್ತಿಯಾಗಲು ಧ್ಯಾನವಷ್ಟೇ ಸಾಲದು. ದೈವಿಕವಾಗಿರುವ ಎಲ್ಲವನ್ನೂ ಅನುಭವಿಸುವುದು ಮತ್ತು ಜೀವನದಲ್ಲಿ ಅಭಿವ್ಯಕ್ತಪಡಿಸುವುದೇ ಅತ್ಯುನ್ನತ ಸಾಧನೆ.” ■

## ನಮ್ಮ ಆಧ್ಯಾತ್ಮಿಕ ತಂದೆ

ಶೋಭಾ ಕೆ. ರಾವ್; ಅನು: ಸುಧಾಕರ್

ಮನುಕುಲವನ್ನು ಪರಿಪೂರ್ಣತೆ ಮತ್ತು ಬೆಳಕಿನ ಕಡೆಗೆ ಮಾರ್ಗದರ್ಶಿಸಲು ಅಮರರಂಥ ಕೆಲವೇ ಮಾಸ್ಟರ್‌ಗಳು ಈ ಭೂಮಿಗೆ ಬಂದಿದ್ದಾರೆ. ತಮ್ಮ ಒಂಬತ್ತನೇ ವಯಸ್ಸಿನಿಂದ ಋಷಿಗಳ ಜೊತೆಗಿದ್ದು, ಕೊನೆಯುಸಿರಿನವರೆಗೂ ಅವರ ಸೇವೆ ಮಾಡಿದ ಮಾಸ್ಟರ್ ಅವರಾಗಿದ್ದರು. ಪ್ರಚಾರದಿಂದ ಯಾವಾಗಲೂ ದೂರ ಉಳಿದಿದ್ದರಿಂದ ಹೆಚ್ಚು ಜನರಿಗೆ ಅವರು ತಿಳಿದಿರಲಿಲ್ಲ.

ಅಮರರ ನೇರ ಶಿಷ್ಯರಾದ ನಮ್ಮ ಗುರೂಜಿಯವರು, ಪ್ರಸಕ್ತ ಕಾಲಕ್ಕೆ ಹೊಂದುವಂಥ ಸರಳ ಜೀವನ ವಿಧಾನಗಳನ್ನು ಮತ್ತು ಅಪರೂಪದ ಜ್ಞಾನವನ್ನು ಅಮರರಿಂದ ಪಡೆಯುತ್ತಿದ್ದಾರೆ. ನಾವು ಕತ್ತಲಯುಗಕ್ಕೆ ಈಗಾಗಲೇ ವಿದಾಯ ಹೇಳಿ, ಬೆಳಕಿನ ಹೊಸಯುಗದಲ್ಲಿದ್ದೇವೆ ಎಂಬ ಜ್ಞಾನವನ್ನು ನಮಗೆ ಅಮರರು ನೀಡಿದ್ದಾರೆ. ದೇವರನ್ನು ಬೆಳಕಿನ ರೂಪದಲ್ಲಿ ನಮಗೆ ಪರಿಚಯಿಸಿ ನಮ್ಮ ಜೀವನವನ್ನು ಸರಳಗೊಳಿಸಿದ್ದಾರೆ. “ನಮ್ಮಲ್ಲಿ ಬೆಳಕನ್ನು ಹೊಂದಿರುವುದಷ್ಟರಿಂದಲೇ ಎಲ್ಲ ಆಚರಣೆಗಳನ್ನು ಬಿಡಬಹುದಾದಂಥ ಕಾಲಘಟ್ಟದಲ್ಲಿ ನಾವು ಈಗ ಇದ್ದೇವೆ. ಬೆಳಕು ಎಲ್ಲ ರೀತಿಯಲ್ಲೂ ಸಹಾಯ ಮಾಡುತ್ತದೆ. ಬೆಳಕನ್ನೇ ಪೂರ್ತಿಯಾಗಿ ಅವಲಂಬಿಸುವುದನ್ನು ನಾವು ಕಲಿಯಬೇಕು” ಎಂದು ಅವರು ಹೇಳುತ್ತಾರೆ.

ಜನ, ಇತರ ಜೀವಿಗಳು ಮತ್ತು ನಿರ್ಜೀವವಸ್ತುಗಳೊಂದಿಗೆ ಭೌತಿಕ ಮಟ್ಟದಲ್ಲಿ ಸಂಪರ್ಕ ಬೆಳೆಸಿಕೊಳ್ಳುವುದರ ಜೊತೆಗೆ, ಆಳವಾದ ಮಟ್ಟಗಳಲ್ಲಿ ಸಂಬಂಧವನ್ನು ಬೆಳೆಸಿಕೊಳ್ಳಬಹುದಾದ ಸುಂದರ ಮಾರ್ಗಗಳಿವೆ ಎಂಬುದು ಅಮರರಿಂದಲ್ಲದಿದ್ದರೆ ನಮಗೆ ತಿಳಿಯುತ್ತಿರಲಿಲ್ಲ.

ಕಾಲ್ಪನಿಕ ಕಥೆಗಳು ಎನ್ನಿಸುವಂತಿದ್ದ ಅವರ ಅತೀಂದ್ರಿಯ ಸಾಹಸಗಳನ್ನು ಕೇಳಲು ಜನರು ಬರುತ್ತಿದ್ದರು. ತಮ್ಮ ನಿರೂಪಣೆಗಳ ಮುಖಾಂತರ ಅಮರರು ಮಂಡಿಸುತ್ತಿದ್ದ ಜ್ಞಾನ ಮತ್ತು ಸಂದೇಶಗಳನ್ನು ಅವರಿಗೆ ಗ್ರಹಿಸಲಾಗುತ್ತಿರಲಿಲ್ಲ. ಸರಳ ಮತ್ತು ವಿನಯವಂತ ಮಾಸ್ಟರ್‌ರನ್ನು ಜನರಿಗೆ ಅರ್ಥಮಾಡಿಕೊಳ್ಳಲಾಗಲಿಲ್ಲ.

ಈಗ ಅವರು ಅತಿ ದೂರದ ಗ್ಯಾಲಕ್ಸಿಯಲ್ಲಿದ್ದರೂ, ನಮ್ಮಿಂದ ದೂರ ಇದ್ದಾರೆ ಎಂದೆನಿಸುವುದಿಲ್ಲ. ನಮ್ಮ ಆಧ್ಯಾತ್ಮಿಕ ತಂದೆಯಾದ ಅಮರರು ಸದಾ ನಮ್ಮ ಹೃದಯಗಳಲ್ಲಿದ್ದು, ನಮಗೆ ಎಲ್ಲ ರೀತಿಯಲ್ಲೂ ಸಹಾಯ ಮತ್ತು ಮಾರ್ಗದರ್ಶನ ನೀಡುತ್ತಾ, ನಮ್ಮ ಸನಿಹದಲ್ಲಿಯೇ ಇದ್ದಾರೆ. ■

## ಪ್ರಶ್ನೆಗಳು ಮತ್ತು ಉತ್ತರಗಳು

**(ಸಂಗ್ರಹ: ಶೋಭಾ ಕೆ. ರಾವ್; ಅನು: ಉಷಾ ವಾಸನ್)**

**ಪ್ರ: ಇತ್ತೀಚಿನ ಸಮಯಗಳಲ್ಲಿ ಗೊಂದಲಗಳನ್ನು ಸೃಷ್ಟಿಸಿರುವುದು ನಕಾರಾತ್ಮಕ ಶಕ್ತಿಗಳೇ?**

ಉ: ನಮ್ಮಲ್ಲಿನ ಗೊಂದಲಗಳಿಗೆ ಕಾರಣ ನಮ್ಮ ಅಸ್ಪಷ್ಟ ಆಯ್ಕೆ. ನಕಾರಾತ್ಮಕ ಶಕ್ತಿಗಳು ನಮ್ಮಲ್ಲಿರುವ ಗೊಂದಲದ ಲಾಭ ಪಡೆದುಕೊಳ್ಳುತ್ತವೆ. ಅವು ಇವುಗಳನ್ನು ಸ್ವಲ್ಪ ಹೆಚ್ಚಿಸಬಹುದು, ಆದರೆ ಅವಾಗಿಯೇ ಗೊಂದಲಗಳನ್ನು ಸೃಷ್ಟಿಸುವುದಿಲ್ಲ.

**ಪ್ರ: ನಮ್ಮ ಭೂಮಿ ನಾಲ್ಕನೇ ಆಯಾಮವನ್ನು ಪ್ರವೇಶಿಸುವುದೆಂಬ ಮಾತುಗಳಿವೆ. ಅಂಥ ಸಂದರ್ಭದಲ್ಲಿ ಮಾನವರಾದ ನಮ್ಮಿಂದ ನಿರೀಕ್ಷಿಸಿರುವುದೇನು?**

ಉ: ನಾಲ್ಕನೇ ಅಥವಾ ಉನ್ನತ ಆಯಾಮಕ್ಕೆ ಪ್ರವೇಶಿಸುವುದರ ಅರ್ಥ, ಅಲ್ಲಿಯ ಕಂಪನಗಳು ಸೂಕ್ಷ್ಮವಾಗಿರುತ್ತವೆ, ನಾವೂ ಕೂಡ ನಮ್ಮ ಕಂಪನಗಳನ್ನು ಬದಲಾಯಿಸಿಕೊಳ್ಳಬೇಕು. ನಮ್ಮಲ್ಲಿ ನವಿರಾದ ಭಾವನೆಗಳು, ವಿಸ್ತೃತ ಭಾವನೆಗಳು ಮತ್ತು ಉದಾತ್ತ ಆಲೋಚನೆಗಳಿರಬೇಕು. ನಾವು ನಮ್ಮ ಆಲೋಚನೆಗಳು ಮತ್ತು ಬದುಕಿನ ಕಂಪನಗಳನ್ನು ಹೆಚ್ಚಿಸಿಕೊಳ್ಳಬೇಕು.

**ಪ್ರ: ಈ ಸಮಯದಲ್ಲಿ ಹಲವು ಚೈತನ್ಯಗಳು ಕೆಲಸ ಮಾಡುತ್ತಿವೆ. ಈ ಚೈತನ್ಯಗಳು ಅಗ್ನಿ, ವಾಯು, ಇಂದ್ರನಂತಹ ವ್ಯಕ್ತಿಗಳ ಸ್ವರೂಪಗಳೇ? ಅವುಗಳನ್ನು ಆವಾಹಿಸಬಹುದೇ?**

ಉ: ಅವುಗಳು ವ್ಯಕ್ತಿಗಳ ಸ್ವರೂಪಗಳೇ, ಆದರೆ ದೇವರು ಅಥವಾ ಉನ್ನತ ಜೀವಿಗಳಂತೆ ಅಲ್ಲ. ಬೇರೆ ಯಾವುದೇ ಚೈತನ್ಯಗಳಂತೆ, ಋಷಿಗಳು ಬಿಡುಗಡೆ ಮಾಡಿರುವ ಹಲವು ತರಹದ ಚೈತನ್ಯಗಳು ಈ ಭೂಮಿಯ ಮೇಲೆ ಕೆಲಸಮಾಡುತ್ತಿವೆ, ಅವುಗಳಿಗೆ ತಮ್ಮದೇ ಆದ ಬುದ್ಧಿಶಕ್ತಿ ಇದೆ. ಈ ಬುದ್ಧಿಶಕ್ತಿ ಕ್ಷೇತ್ರದ ಕೇಂದ್ರವನ್ನು ಒಬ್ಬ ವ್ಯಕ್ತಿಯನ್ನಾಗಿ ಆವಾಹಿಸಬಹುದು. ಮೊದಲು ನಾವು ಚೈತನ್ಯಗಳನ್ನು ಗುರುತಿಸಬೇಕು, ಆಮೇಲೆ ಕೇಂದ್ರವನ್ನು ಸಂಪರ್ಕಿಸಬೇಕು ಮತ್ತು ಆವಾಹಿಸಬೇಕು.

**ಪ್ರ: ಈ ಚೈತನ್ಯಗಳು ನಮ್ಮೊಳಗೆ ಕೆಲಸ ಮಾಡುತ್ತವೆಯೇ ಮತ್ತು ಕರ್ಮಗಳ ಪರಿವರ್ತನೆಗೆ ಕಾರಣವಾಗುತ್ತವೆಯೇ?**

ಉ: ಎಲ್ಲ ಚೈತನ್ಯಗಳೂ ಕರ್ಮಗಳನ್ನು ತೆಗೆದು ಹಾಕುವುದಿಲ್ಲ. ನಾವು ಧ್ಯಾನ ಮಾಡಿದಾಗ ಈ ಚೈತನ್ಯಗಳು ನಮ್ಮೊಳಗೆ ಕೆಲಸಮಾಡುತ್ತಿರುತ್ತವೆ. ಅವು ನಮ್ಮ ಅಂತರ್‌–ಗ್ರಹಣ–ಶಕ್ತಿಯನ್ನು ಚುರುಕುಗೊಳಿಸುತ್ತವೆ, ಪ್ರಮುಖವಾಗಿ ನಮ್ಮಲ್ಲಿನ ನಕಾರಾತ್ಮತೆಗಳನ್ನು ತೊಡೆದು ಹಾಕುತ್ತವೆ. ಈ ಚೈತನ್ಯಗಳ ಮುಖ್ಯ ಕೆಲಸ, 'ನಾವು ಕಲಿಯುಗದಲ್ಲಿ ಇಲ್ಲ, ನಾವಾಗಲೇ ಸತ್ಯಯುಗದಲ್ಲಿ ಇದ್ದೇವೆ ಎಂಬ ಸತ್ಯದ ಅರಿವನ್ನು ಉಂಟುಮಾಡುವುದು.'

**ಪ್ರ: ಈ ಚೈತನ್ಯಗಳು ಪ್ರಳಯ ಕಾಲದಲ್ಲಿ ಮಾತ್ರ ಕಾರ್ಯಶೀಲವಾಗಿರುತ್ತವೆಯೇ? ಅವು ಎಲ್ಲಾ ಯುಗಗಳಲ್ಲೂ ಈ ಭೂಮಿಯ ಮೇಲೆ ಇರುತ್ತವೆಯೇ?**

ಉ: ಇಲ್ಲ. ಈ ಚೈತನ್ಯಗಳನ್ನು ವಿಶೇಷ ಉದ್ದೇಶಗಳಿಗಾಗಿ, ಅದರಲ್ಲೂ ಮುಖ್ಯವಾಗಿ ಹೊಸಯುಗವನ್ನು ಪ್ರವೇಶಿಸಲು ನಮ್ಮ ಸಹಾಯಕ್ಕಾಗಿ ತರಲಾಗಿದೆ. ನಾವು ಇದನ್ನು ಪ್ರಳಯ ಚೈತನ್ಯಗಳೆಂದು ವರ್ಗೀಕರಿಸಬಹುದು. ಈ ಚೈತನ್ಯಗಳು ಕೆಲಸ ಮಾಡುತ್ತವೆ ಮತ್ತು ವ್ಯಯವಾಗುತ್ತವೆ. ನಾವು ಸಂಪೂರ್ಣವಾಗಿ ಹೊಸಯುಗವನ್ನು ಪ್ರವೇಶಿಸಿದ ನಂತರ ಅವುಗಳ ಅವಶ್ಯಕತೆಯಿರುವುದಿಲ್ಲ. ಬೇರೆಬೇರೆ ಯುಗಗಳಲ್ಲಿ ಅವಶ್ಯವಿರುವ ಬೇರೆಬೇರೆ ಚೈತನ್ಯಗಳನ್ನು ಋಷಿಗಳು ಕೆಳತರುತ್ತಾರೆ.

**ಪ್ರ: ನಾವು ನಮ್ಮ ಕರ್ಮಗಳನ್ನು ನಿವಾರಿಸಿಕೊಂಡಂತೆ, ಈ ಪ್ರಪಂಚದೊಂದಿಗೆ ತನ್ನಷ್ಟಕ್ಕೆ ತಾನೇ ನಿರ್ಲಿಪ್ತತೆಯನ್ನು ಬೆಳೆಸಿಕೊಳ್ಳುತ್ತೇವೆಯೇ?**

ಉ: ಅದು ಹಾಗೆ ಕಾಣಿಸುತ್ತದೆ, ಆದರೆ ಆ ರೀತಿ ಆಗುವುದಿಲ್ಲ. ನಾವು ಆಧ್ಯಾತ್ಮಿಕವಾಗಿ ಬೆಳೆದಂತೆಲ್ಲ, ನಿರ್ಲಿಪ್ತತೆಯನ್ನು ಬೆಳೆಸಿಕೊಳ್ಳಲು ನಾವು ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು ಮತ್ತು ನಮ್ಮ ಬದುಕಿನಲ್ಲಿ ವಿಷಯಗಳ ಆದ್ಯತೆಯನ್ನು ಗುರುತಿಸಿಕೊಳ್ಳಬೇಕು. ಅದೊಂದು ಪ್ರತ್ಯೇಕ ಪ್ರಕ್ರಿಯೆ.

**ಪ್ರ: ನಾವು ಆಧ್ಯಾತ್ಮಿಕವಾಗಿ ಬೆಳೆದಂತೆಲ್ಲ ಹೆಚ್ಚು ಮನೋವಸ್ತುವನ್ನು ಪಡೆಯುತ್ತೇವೆಯೇ?**

ಉ: ನಾವು ಆಧ್ಯಾತ್ಮಿಕವಾಗಿ ಪ್ರಗತಿಹೊಂದಿದಂತೆ, ಮನಸ್ಸು ಶುದ್ಧೀಕರಣಗೊಂಡು ಪರಿಶುದ್ಧವಾಗುತ್ತದೆ; ಆದ್ದರಿಂದ ಅದರ ದಕ್ಷತೆ ಹೆಚ್ಚುತ್ತದೆ. ನಾವು ಹೆಚ್ಚು ಮನೋವಸ್ತುವನ್ನು ಸೇರಿಸುವುದಿಲ್ಲ. ಅದರ ಅವಶ್ಯಕತೆ ಇಲ್ಲ.

**ಪ್ರ: ನಾವು ಹೆಚ್ಚು ಮನೋವಸ್ತುವನ್ನು ಪಡೆದರೆ ಹೊಸ ಸಾಮರ್ಥ್ಯಗಳು ತೆರೆದುಕೊಳ್ಳುತ್ತವೆಯೇ?**

ಉ: ಇಲ್ಲ.


**ಪ್ರ: ನಾವು ನಿಮ್ಮ ಆದೇಶಗಳನ್ನು ಅನುಸರಿಸಿದರೆ, ನೀವು ನಮ್ಮನ್ನು ಎತ್ತರಕ್ಕೆ ಒಯ್ಯಬಲ್ಲ ಘಟ್ಟವನ್ನು ತಲುಪುತ್ತೇವೆಯೇ?**

ಉ: ಹೌದು. ನಾನು ಅದಕ್ಕೋಸ್ಕರ ಕಾಯುತ್ತಿದ್ದೇನೆ. ನೀವು ಆ ಘಟ್ಟವನ್ನು ತಲುಪುತ್ತೀರೋ ಇಲ್ಲವೋ, ನಾವು ಎಲ್ಲಾ ಸಮಯದಲ್ಲೂ ನಿಮ್ಮೊಂದಿಗಿರುತ್ತೇವೆ.

### ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| 2012 - End or Beginning | 100/- |
| Preparing for 2012 | 100/- |
| iGuruji - Vol 1 | 150/- |
| iGuruji - Vol 2 | 120/- |
| iGuruji - Vol 3 | 150/- |
| iGuruji - Vol 4 | 150/- |
| iGuruji - Vol 5 | 100/- |
| Higher Communication & Other Realities | 100/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol-2 | 150/- |
| Guruji Speaks Part - I | 200/- |
| Guruji Speaks Part - II | 200/- |
| Guruji Speaks Vol - 3 | 150/- |
| Guruji Speaks Vol - 4 | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ–ಗುರೂಜಿ ಭಾಗ 1 | 150/- |
| ಐ–ಗುರೂಜಿ ಭಾಗ 2 | 120/- |
| ಹೊಸ ಯುಗದ ವಾಸ್ತವಗಳು | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| 2012ಕ್ಕೆ ಸಿದ್ಧತೆಗಳು | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| २०१२ – सालाची तयारी (Marathi) | 100/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA/48/2012-14
Date of posting Newsletter-25th of Every Month. Posted at Bangalore GPO No. of Pages-8



ಗುರೂಜಿ ಕೃಷ್ಣಾನಂದ (1939)

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಶನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

# ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಸ್ವರ್ಣಲತಾ)

21-11-2011ರಂದು ಬೆಳಕಿನ ಸಾಗರದೊಡನೆ ನಾನು ಸಂಪರ್ಕ ಕಲ್ಪಿಸಿಕೊಂಡಾಕ್ಷಣ, ಇಡೀ ಸಾಗರವೇ ಬೆಳಕಿನ ಕಣಗಳಿಂದ ತುಂಬಿರುವಂತೆ ಕಂಡಿತು. ನಂತರ ಆ ಸಾಗರ ಎಲ್ಲಾ ದಿಕ್ಕಿನಲ್ಲೂ ಅನಂತವಾಗಿ ವಿಸ್ತರಿಸಿತು. ನಾವೆಲ್ಲರೂ ಆ ಸಾಗರದಲ್ಲಿ ಅವರ್ಣನೀಯ ದಿವ್ಯ ಶಾಂತತೆಯಿಂದ ತೇಲುತ್ತಿದ್ದೆವು. ಜೊತೆಗೆ ನಾನು ಇತರರೊಂದಿಗೆ ನನ್ನ ಅನುಭವಕ್ಕೆ ನಿಲುಕುವಷ್ಟು ವಿಸ್ತರಿಸಿದೆ. ಪ್ರತಿಯೊಂದು ಆತ್ಮವೂ ಹೆಚ್ಚುಹೆಚ್ಚು ವಿಸ್ತರಿಸಲು ಮತ್ತು ಅನುಭವಿಸಲು ಸಾಧ್ಯ ಎಂದು ನಾನು ಆ ಕ್ಷಣದಲ್ಲಿ ಅರಿತೆ. ಎಲ್ಲಾ ಆತ್ಮಗಳೂ ಒಂದೇ ಆಗಿದ್ದರೂ, ಅವು ಇನ್ನೂ ಹೆಚ್ಚಿನವುಗಳಾಗಿರಬಹುದು!

– ವಿದ್ಯಾ ವೀರ್‌ಕರ್

7-11-2011ರಂದು ದೂರದರ್ಶನ ವೀಕ್ಷಿಸುತ್ತಿದ್ದಾಗ, ಅಲ್ಲಿ ನನಗೆ ಕ್ರಿಸ್ತನ ಇರುವಿಕೆಯ ಅನುಭವವಾಗಿ ಅವರಿಂದ ಚೈತನ್ಯಗಳನ್ನು ಪಡೆಯಲು ಆರಂಭಿಸಿದೆ. ದೈವತ್ವದ ಅನುಭವವಾಗಬೇಕೆಂಬ ನನ್ನ ಬಲವಾದ ಬಯಕೆಯನ್ನು ಅವರ ಮುಂದಿಟ್ಟಾಗ, ಅವರೊಂದು ಬೆಳಕಿನ ಗೋಳವಾಗಿ ಪರಿವರ್ತನೆಗೊಂಡು ನನ್ನನ್ನು ಅದರೊಳಕ್ಕೆ ಸೆಳೆದುಕೊಂಡರು. ಕೆಲವೇ ಕ್ಷಣಗಳಲ್ಲಿ ನಾನು ಒಂದು ಅನಂತವಾದ ಬೆಳಕಿನ ಮುಂದೆ ಇದ್ದಂತೆ ಅನಿಸಿತು. ನಂತರ ನಾನೇ ಬೆಳಕಾಗಿ ಪರಿವರ್ತನೆಯಾದೆ. ಆಗ ನಾನು ಶೂನ್ಯವಾದಂತೆಯೂ ಮತ್ತು ಆ ಶೂನ್ಯದಲ್ಲಿ ಎಲ್ಲವೂ ಇರುವಂತೆಯೂ ಹಾಗೂ ನನ್ನ ಮತ್ತು ಬೆಳಕಿನ ನಡುವೆ ಯಾವ ವ್ಯತ್ಯಾಸವೂ ಇಲ್ಲವಾದಂತೆ ಅನಿಸಿತು.

– ರಾಖಿ

23-10-2011ರಂದು ನಡೆದ ವಾಲಂಟಿಯರ್‌ಗಳ ಸಭೆಯಲ್ಲಿ, ಗುರೂಜಿಯವರು, "ನಾವು ಎಂದಾದರೂ ಇಡೀ ವಿಶ್ವಕ್ಕೆ ವಿಸ್ತರಿಸಿ, ನಾವೇ ವಿಶ್ವವಾಗಬಹುದು" ಎಂದು ತಿಳಿಸಿದರು. ಗುರೂಜಿಯವರು ಈ ಮಾತು ಹೇಳಿದಾಗ ನನ್ನ ಕಣ್ಣುಗಳು ಮುಚ್ಚಿದ್ದವು ಮತ್ತು ನಾನು ಇಡೀ ವಿಶ್ವಕ್ಕೆ ವಿಸ್ತರಿಸಿದ ಅನುಭವವಾಯಿತು. ಅದು ನನಗೆ ಗುರೂಜಿಯವರ ಅನುಗ್ರಹವೆಂದೆನಿಸಿತು. ಅಂದಿನಿಂದ, ಹೆಚ್ಚಿನ ಸಮಯದಲ್ಲಿ ನನ್ನ ಅರಿವು ವಿಸ್ತರಿಸಿದಂತೆ ಅನಿಸುತ್ತದೆ. ನಾನು ನಿರ್ಧಾರ ಮಾಡಿದಾಗಲೆಲ್ಲ ನನ್ನ ಅರಿವು ಮೇಲೇರುತ್ತದೆ. ಈ ಮೊದಲು ಇದು ಬಹಳ ಕಷ್ಟವಾಗಿತ್ತು.

– ಸುನೀಲ್ ಬಿಸರಹಳ್ಳಿ

ಸಹಜ ಹಾಗೂ ಸಾಮಾನ್ಯ ಜೀವನ ನಡೆಸಲು ನನ್ನ ಮನೋಸ್ಥಿತಿಯಲ್ಲಿ ಒಂದು ಅಡಚಣೆ ಇತ್ತು. ಅದೇ ನನಗೆ ಒಂದು ದೊಡ್ಡ ಸಮಸ್ಯೆಯಾಗಿತ್ತು! "ಜೀವನ ಸಹಜವಾಗಿ ಮುಂದುವರೆಯುತ್ತಾ, ಮುಂದಿನ ಹಂತಕ್ಕೆ ನಮ್ಮನ್ನು ಕರೆದೊಯ್ಯುತ್ತದೆ. ಅಲ್ಲಿಯವರೆಗೆ ಕಷ್ಟಪಡುವುದೇಕೆ?" ಎಂಬ ಗುರೂಜಿಯವರ ಮಾತುಗಳನ್ನು ನಾನು ಕೇಳಿದ ನಂತರ, ಸಮಸ್ಯೆಯ ಬಗೆಗಿನ ನನ್ನ ಅಭಿಪ್ರಾಯವನ್ನು ಬದಲಾಯಿಸಿಕೊಂಡೆ. ಈಗ ನಾನು ಹೆಚ್ಚಿನ ಆತ್ಮವಿಶ್ವಾಸದಿಂದ ಮತ್ತು ಹೃತ್ಪೂರ್ವಕವಾಗಿ ಕೆಲಸ ಮಾಡಲು ಸಾಧ್ಯವಾಗಿದೆ.

– ಸೌಮ್ಯ

ಧ್ಯಾನದಲ್ಲಿ ನನ್ನ ಅರಿವು ದೇಹ, ಮನಸ್ಸು ಮತ್ತು ಬುದ್ಧಿಯನ್ನು ಮೀರಿ ಮುಂದೆ ಹೋದ ಅನುಭವವಾಯಿತು. ನನ್ನನ್ನು ನಾನು ನೀಲಿ ಬಣ್ಣದ ಬೆಳಕಿನ ರೂಪದಲ್ಲಿ ಕಂಡೆ. ಅಲ್ಲಿ ಒಳ್ಳೆಯ ಅಥವಾ ಕೆಟ್ಟ ಯಾವ ಭಾವನೆಗಳೂ ಇರಲಿಲ್ಲ. ನನಗೆ ಆನಂದದ ಅನುಭವವಾಯಿತು. ಅದೊಂದು ಸ್ಥಿತಿ ಎಂಬುದರ ಅರಿವು ನನಗಾಯಿತು. ನನಗೆ ಸಂತೋಷ, ಹೊಸತನ ಮತ್ತು ವರ್ಣಿಸಲಾಗದ ಅನೇಕ ವಿಷಯಗಳ ಅನುಭವವಾಯಿತು.

– ಚಾರುಲತಾ ಬಿರಾಜ್‌ದಾರ್

ನಾನು ನನ್ನ ಆತ್ಮದೊಡನೆ ಸಂಭಾಷಿಸಲು ಆರಂಭಿಸಿದ್ದೇನೆ. ಅದರ ಧ್ವನಿಯನ್ನು ಕೇಳಿರದಿದ್ದರೂ, ಆಕಾರವನ್ನು ನೋಡಿರದಿದ್ದರೂ ಪ್ರತಿದಿನ ನನಗೆ ಅದರ ಅನುಭವವಾಗುತ್ತದೆ. ಅದು ನನ್ನನ್ನು ಬಹಳವಾಗಿ ಪ್ರೀತಿಸುತ್ತದೆ. ಅದು ನನಗೆ ಮತ್ತು ಎಲ್ಲರಿಗೂ ಅನಿರ್ಬಂಧ ಪ್ರೀತಿಯನ್ನು ಹೊಂದಿದೆ. ನನ್ನ ಹೃದಯಭಾಗದತ್ತ ನನ್ನ ಗಮನವನ್ನು ಹರಿಸಿದರೆ ತಕ್ಷಣ ಅದು ಪ್ರತಿಕ್ರಿಯಿಸುತ್ತದೆ. ಅದು ನನಗೆ ಹೆಚ್ಚಿನ ಪ್ರೀತಿಯನ್ನು ಹರಿಸಿದ ನಂತರ ಅದು ನಿಧಾನವಾಗಿ ಮೇಲೇರಿ ನನ್ನ ಮೂರನೇ ಕಣ್ಣಿನ ಮೇಲೆ ಕುಳಿತು ಪ್ರೀತಿ ಮತ್ತು ತಾಳ್ಮೆಯ ಕಂಪನಗಳನ್ನು ಹೊರಹೊಮ್ಮುತ್ತದೆ. ನನ್ನ ಸಂಪೂರ್ಣ ಗಮನವನ್ನು ನನ್ನೊಳಗೆ ಇನ್ನೂ ಆಳಕ್ಕೆ ಸೆಳೆಯಲು ನನ್ನ ಆತ್ಮವು ಬಹಳ ಪ್ರಯತ್ನಿಸುತ್ತಿದೆ.

– ವಿದ್ಯಾ ವಿಶ್ವಾಮಿತ್ರ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.300/-
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, ಡಾ|| ಮೋದಿ ಮುಖ್ಯ ರಸ್ತೆ, ಬೆಂಗಳೂರು - 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ